Mr. SPEAKER.—The leave is granted.

ಶ್ರೀ ಎಚ್. ಬಿ. ಜ್ವಾಲನಯ್ಯ.—ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ವಿಧೇಯಕ, 1969 ಮಸೂದೆಯನ್ನು ನಾನು ಮಂಡಿಸುತ್ತೇನೆ.

Mr. SPEAKER.—The Bill is introduced.

(B) Mysore Agricultural Produce Market Committee (Amendment) Bill, 1969

Consideration postponed

Sri K. H. PATIL.—Before submiting my Bill to the House I want to submit one thing. Since I am feeling that the President's assent is necessary for my amendment Bill, I request the Chair to withhold the consideration of it. I am moving the Government to obtain the consent of the President for my amendment Bill.

Mr. SPEAKER.—Yes.

Mysore Sales Tax (Amendment) Bill, 1969.

Motion to consider

ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, ಮೈಸೂರು ರಾಜ್ಯದ ಮಾರಾಟ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿಯ ವಿಧೇಯಕ, 1969ನ್ನು ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

Mr. SPEAKER.—Motion moved :

"That the Mysore Sales Tax (Amendment) Bill, 1969, be taken into consideration."

† ಶ್ರೀ ಎಚ್. ಬಿ. ಜ್ವಾಲನಯ್ಯ.—ಸ್ವಾಮಿ, 1969ನೇ ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ಇಲ್ಲಿ ತರುವುದಕ್ಕೆ ಮುಂಚೆ, ಮೈಸೂರು ಸಂಸ್ಥಾನದಲ್ಲಿ ಪಾನನಿರೋಧವನ್ನು ಜಾರಿಗೆ ತರುವುದರಿಂದ ನಷ್ಟವಾಗುತ್ತದೆ, ಆ ನಷ್ಟವನ್ನು ತುಂಬಿಕೊಳ್ಳುವುದಕ್ಕೋಸ್ಕರ ಈ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ನಾವು ತರುತ್ತೇವೆಂದು ಸರ್ಕಾರದವರು ಈ ಸಭೆಯಲ್ಲಿ ಹಿಂದೆ ಹೇಳಿದ್ದು, ಆಗ ಆ ನಷ್ಟವನ್ನು ತುಂಬಿಕೊಳ್ಳುವದಕ್ಕೋಸ್ಕರವಾಗಿ ಈ ಸಭೆಯು ಅನುಮತಿಯನ್ನು ಕೊಟ್ಟಿದ್ದು ಈಗ ಮಹಾತ್ಮ ಗಾಂಧೀಜಿಯವರ ಶತಮಾನೋತ್ಸವದ ಸಲುವಾಗಿ ಪಾನನಿರೋಧವನ್ನು ರದ್ದುಗೊಳಿಸಿ ಅದರಲ್ಲಿಯೂ ಕೂಡ ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಸರ್ಕಾರಕ್ಕೆ ಬರುವಂಥ ವ್ಯವಸ್ಥೆ ಆಗಿರುವುದು ನಮಗೆ ಗೊತ್ತಿದೆ. ಮೈಸೂರು ಸೇಲ್ಸ್ ಟ್ಯಾಕ್ಸ್ ಆಕ್ಟ್ 1957ನೇ 10ನೇ ನಿಯಮದ ಉಪನಿಯಮ (1)ರಲ್ಲಿ ಪ್ರತಿಯೊಬ್ಬ ಡೀಲರ್‌ಗೆ 10 ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಟ್ಯಾಕ್ಸ್ ಲಿಮಿಟ್ ಎಂಬುದಾಗಿ ಇದೆ. ಇದಕ್ಕೆ ನಾನು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಈ ವಿಧಿಯಲ್ಲಿ 10 ಸಾವಿರ ರೂಪಾಯಿಗಳು ಎನ್ನುವುದಕ್ಕೆ ಬದಲಾಗಿ 25 ಸಾವಿರ ರೂಪಾಯಿಗಳೆಂದು ಸೇರಿಸಬೇಕೆಂದು ಹೇಳಿದ್ದೇನೆ. ಈಗ ಮಹಾರಾಷ್ಟ್ರ, ರಾಜಸ್ಥಾನ, ಒರಿಸ್ಸಾ, ಮತ್ತು ಗುಜರಾತ್—ಈ ರಾಜ್ಯಗಳಲ್ಲಿ ಈ ಒಂದು ಮಾರಾಟ ತೆರಿಗೆಯ ನಿಯಮವನ್ನು ಬದಲಾಯಿಸಿ ಟರ್ನ್‌ಓವರ್ ಲಿಮಿಟ್ಟನ್ನು ಬಹಳವಾಗಿ ವ್ಯತ್ಯಾಸಪಡಿಸಿದ್ದಾರೆ. 1948ನೇ ಇಸವಿಯಲ್ಲಿ ಈ ಮಸೂದೆಯನ್ನು ತರುವ ಸಂದರ್ಭದಲ್ಲಿ ದೇಶದಲ್ಲಿರತಕ್ಕ ಎರ್ಲಾ ಪದಾರ್ಥಗಳ ಬೆಲೆಯನ್ನು ಈಗಿನ ಕಾಲಕ್ಕೆ ಹೋಲಿಸಿ ನೋಡಿದರೆ ಸುಮಾರು ನಾಲ್ಕೈದು ಪಟ್ಟು ಜಾಸ್ತಿಯಾಗಿದೆ. ಹಿಂದೆ 1968ನೇ ಇಸವಿಯಲ್ಲಿ 10 ಸಾವಿರ ರೂಪಾಯಿಗಳಷ್ಟು ಟರ್ನ್‌ಓವರ್ ಟ್ಯಾಕ್ಸ್ ಲಿಮಿಟ್ ಮಾಡಿಕೊಂಡಿದ್ದರು. ಈಗ ಸಾಮಾನುಗಳ ಮೌಲ್ಯ 40—50 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ. ಈಗಿರುವ ಕಾನೂನು ಪ್ರಕಾರ 10 ಸಾವಿರ

ರೂಪಾಯಿಗಳಷ್ಟು ಟರ್ನ್‌ಓವರ್ ಮಾಡುವಂತಹವನಿಗೆ ಈ ದೇಶದಲ್ಲಿರುವ ಒಂದು ಬೀಡಿ ಅಂಗಡಿಯಲ್ಲಿ ಅವರಲ್ಲಿಯೂ ಸಣ್ಣಪುಟ್ಟ ವರ್ತಕರ ಅಂಗಡಿಯಲ್ಲಿ ಇದಕ್ಕಿಂತಲೂ ಬಹಳವಾಗಿ ಟರ್ನ್‌ಓವರ್ ಈಗ ಆಗುತ್ತಿದೆ. ಅವರು ಲೆಕ್ಕಪತ್ರಗಳನ್ನು ಇಡುವುದು, ತೆರಿಗೆಗಳನ್ನು ವಸೂಲುಮಾಡತಕ್ಕ ವಿಚಾರದಲ್ಲಿ ಕಿರುಕುಳಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಿಮ್ಮ ರಾಜ್ಯದಲ್ಲಿರತಕ್ಕ ಸಣ್ಣಪುಟ್ಟ ವರ್ತಕರಿಗೆ ಬಹಳ ಕಿರುಕುಳ ಆಗುತ್ತಿದೆ. ಟರ್ನ್‌ಓವರ್ ಲಿಮಿಟ್ಟನ್ನು 10 ಸಾವಿರ ರೂಪಾಯಿಗಳಿಂದ 25 ಸಾವಿರ ರೂಪಾಯಿಗಳವರೆಗೆ ಏರಿಸಿದಾಗ ಸರ್ಕಾರಕ್ಕೆ ಕೇವಲ ಒಂದು ಕೋಟಿ ರೂಪಾಯಿಗಳಷ್ಟು ಖೋತಾ ಬರಬಹುದೆಂದು ಅಂದಾಜು ಮಾಡಲಾಗಿದೆ. ಮಹಾರಾಷ್ಟ್ರದಲ್ಲಿ ಮ್ಯಾನುಫ್ಯಾಕ್ಚರರುಗಳಿಗೆ ಮತ್ತು ಇಂಪೋರ್ಟರ್ಸ್ ಅವರಿಗೆ ಟರ್ನ್‌ಓವರ್ 10 ಸಾವಿರ ರೂಪಾಯಿಗಳು, ಇತರ ವರ್ತಕರಿಗೆ 30 ಸಾವಿರ ರೂಪಾಯಿಗಳು ಎಂಬುದಾಗಿ ಇಟ್ಟಿದ್ದಾರೆ. ಗುಜರಾತಿನಲ್ಲಿ 20 ಸಾವಿರ ರೂಪಾಯಿಗಳ ಲಿಮಿಟ್ಟನ್ನು ಇಟ್ಟಿದ್ದಾರೆ. ಇತರ ವರ್ತಕರಿಗೆ 30 ಸಾವಿರ ರೂಪಾಯಿಗಳೆಂದು ಇಟ್ಟಿದ್ದಾರೆ. ರಾಜಾಸ್ಥಾನದಲ್ಲಿ 15 ಸಾವಿರ ರೂಪಾಯಿಗಳ ಲಿಮಿಟ್ ಇಟ್ಟಿದ್ದಾರೆ. ಕೊ-ಆಪರೇಟಿವ್ ಸೊಸೈಟಿಗಳಿಗೆ 25 ಸಾವಿರ ರೂಪಾಯಿಗಳವರೆಗೆ ಲಿಮಿಟ್ ಇಟ್ಟಿದ್ದಾರೆ. ನಮ್ಮಲ್ಲಿ ಸಾರ್ವಜನಿಕ ವರ್ತಕರು ಮತ್ತು ಸಹಕಾರ ಸಂಸ್ಥೆಗಳೇನಿವೆಯೋ ಅವುಗಳು ಈ ಸೇರ್ಸ್‌ಟ್ಯಾಕ್ಸ್ ನಿಯಮಕ್ಕೊಳಪಟ್ಟಿವೆ. ಈಗ ನಮ್ಮಲ್ಲಿ ನುಮಾರು ಸಣ್ಣ ವರ್ತಕರು ಅನೇಕ ಐಟಂಗಳ ಸಾಮಗ್ರಿಗಳನ್ನು ಮಾರಾಟಮಾಡುತ್ತಿದ್ದಾರೆ. ಅದಕ್ಕೆ ನಾನಾ ರೀತಿಯ ತೆರಿಗೆಗಳನ್ನು ಈ ಸೇರ್ಸ್‌ಟ್ಯಾಕ್ಸ್ ಆಕ್ಟ್ ಪ್ರಕಾರ ವಿಧಿಸಬೇಕಾಗಿದೆ. ಒಬ್ಬ ಸಣ್ಣ ವರ್ತಕ 30—40 ಐಟಂಗಳನ್ನು ಮಾರಾಟಮಾಡುತ್ತಾನೆ. ಒಂದೊಂದು ಐಟಂಗೆ ಒಂದೊಂದು ತೆರಿಗೆಯನ್ನು ಲೆಕ್ಕಮಾಡುವುದಕ್ಕೋಸ್ಕರವಾಗಿ ಲೆಕ್ಕವನ್ನು ಇಡುವುದು, ಅದಕ್ಕೆ ಒಂದು ಸ್ಪೆಷ್ಯಲ್ ಇಡಬೇಕಾಗುತ್ತದೆ. ಇದರಿಂದ ಅವನಿಗೆ ಬಹಳವಾಗಿ ಕಷ್ಟವಾಗುತ್ತದೆ. ಇದನ್ನು ಸರ್ಕಾರದವರು ಪರಿಶೀಲಿಸಬೇಕು. ಇದರಿಂದ ಒಂದು ಕೋಟಿ ರೂಪಾಯಿಗಳಷ್ಟು ಖೋತಾ ಬರುತ್ತದೆ. 10 ಸಾವಿರ ರೂಪಾಯಿಗಳ ಲಿಮಿಟ್‌ನಿಂದ 25 ಸಾವಿರ ರೂಪಾಯಿಗಳವರೆಗೆ ಏರಿಸಿ, ಈಗಿರುವ ಸೇರ್ಸ್ ಟ್ಯಾಕ್ಸ್ ವಸೂಲಿಕ್ರಮ ಸರಿಯಾದಂಥ ರೀತಿಯಲ್ಲಿ ಮಾಡಿದರೆ ಇಲ್ಲಿ 6—8 ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಬರುವ ಅವಕಾಶವಿರುತ್ತದೆ. ಸಣ್ಣಪುಟ್ಟ ವರ್ತಕರಿಗೆ ಕಿರುಕುಳ ಕೊಡುವುದನ್ನು ಕಡಿಮೆಮಾಡಬೇಕು. ನಾವು ಈ ಸಭೆಯ ಮುಂದೆ ಮಂಡಿಸಿರುವ ತಿದ್ದುಪಡಿಯನ್ನು ಒಪ್ಪಿದರೆ ನಮ್ಮ ರಾಜ್ಯಕ್ಕೆ ಸರಿಯಾದಂಥ ರೀತಿಯಲ್ಲಿ ವಸೂಲಾಗಿ ಹೆಚ್ಚು ಆದಾಯ ಬರುತ್ತದೆ. ಈಗಿರುವ ಖೋತಾವನ್ನು ತುಂಬಿಸಿಕೊಳ್ಳುವುದಕ್ಕೆ ಅವಕಾಶವಿದೆ. ಅದರ ಜೊತೆಗೆ ನಮ್ಮ ದೇಶದ ನಾನಾ ಕಡೆಗಳಿಂದ ಚಿಕ್ಕಪುಟ್ಟ ವರ್ತಕರು ದೇಶದಲ್ಲಿ ನಿಜವಾದ ಸೇವೆಯನ್ನು ಮಾಡುತ್ತಿದ್ದಾರೆ. ಈ ಸೇವೆಯನ್ನು ಮಾಡುವುದು ಈಗ ಬಹಳ ಕಷ್ಟ. 8—10 ಸಾವಿರ ರೂಪಾಯಿಗಳಷ್ಟು ಸಣ್ಣ ಬಂಡವಾಳವನ್ನು ಹಾಕಿಕೊಂಡು ಎಲ್ಲೆಲ್ಲೋ ಸಾಲಸೋಲಮಾಡಿ ಕೊಂಡು ಹಣವನ್ನು ತಂದು ವ್ಯಾಪಾರಮಾಡುತ್ತಿದ್ದರೂ ಸೇರ್ಸ್‌ಟ್ಯಾಕ್ಸ್ ಅಧಿಕಾರಿಗಳು ಈ ರೀತಿ ಲೆಕ್ಕ ಇಡಬೇಕು, ಈ ರೀತಿ ಲೆಕ್ಕ ಇಡಬಾರದು ಎಂಬುದಾಗಿ ಕಿರುಕುಳ ಕೊಡುವುದು ದಿನನಿತ್ಯ ಸಮಸ್ಯೆಯಾಗಿದೆ. ದೇಶದ ನಾನಾ ಕಡೆಗಳಿಂದ ಈ ತಿದ್ದುಪಡಿ ಈ ಸಭೆಯಲ್ಲಿ ಬಂದಮೇಲೆ ನೂರಾರು ಪತ್ರಗಳು ನನಗೆ ಬರುತ್ತಿದೆ. ಸಣ್ಣ ವರ್ತಕರಿಗೆ ಈಗ ಅಲ್ಲಿ ಆಗುತ್ತಿರುವ ಕಿರುಕುಳದ ಬಗ್ಗೆ ಅವರು ನನಗೆ ಬರೆದು ತಿಳಿಸುತ್ತಿದ್ದಾರೆ. 10 ಸಾವಿರ ರೂಪಾಯಿಗಳ ಟರ್ನ್‌ಓವರ್ ಲಿಮಿಟ್ ಏನಿದೆ ಅದನ್ನು 25 ಸಾವಿರ ರೂಪಾಯಿಗಳವರೆಗೆ ಏರಿಸಿದರೆ ಸರ್ಕಾರಕ್ಕೆ ನಷ್ಟವಾಗುವುದಿಲ್ಲ. ದೇಶದಲ್ಲಿರತಕ್ಕ ಸಣ್ಣಪುಟ್ಟ ವರ್ತಕರಿಗೆ ಒಂದು ರೀತಿಯಲ್ಲಿ ಸಹಾಯವಾಗುತ್ತದೆಂದು ಅನೇಕರು ನನಗೆ ಬರೆದು ತಿಳಿಸಿದ್ದಾರೆ. ಯಾವ ತೆರಿಗೆಯಾಗಲಿ, ತೆರಿಗೆಯನ್ನು ವಿಧಿಸುವಂತಹ ಸಂದರ್ಭದಲ್ಲಿ ತೆರಿಗೆ ವಸೂಲಿ ಕ್ರಮದ ಬಗ್ಗೆ ಕೂಡ ಯೋಚಿಸಬೇಕಾಗಿದೆ. ಸಣ್ಣಪುಟ್ಟ ವರ್ತಕರು ಈಗಿರತಕ್ಕ ಕ್ರಮದ ಪ್ರಕಾರ ಲೆಕ್ಕಪತ್ರಗಳನ್ನು ಇಡಬೇಕಾದರೆ, ಅದಕ್ಕೆ ಒಬ್ಬ ಚಾರ್ಟರ್ಡ್ ಅಕೌಂಟೆಂಟನ್ನೇ ಇಡಬೇಕಾಗಿದೆ. ಇಲ್ಲದಿದ್ದರೆ ಅವನಿಗೆ ಅದನ್ನು ಪೂರೈಸುವುದಕ್ಕಾಗುವುದಿಲ್ಲ. ಇಂತಿಥಂಹಸಾಮಾನುಗಳಿಗೆ ಇಂತಿಂಥ ಟಾಕ್ಸ್ ಲಗ್ಸುರಿ ಗೂಡ್ಸ್‌ಗೆ 11-12 ಪರ್‌ಸೆಂಟ್ ಇದೆ. ಒಂದು ಸ್ನೋ ಪೌಡರ್ ಮಾರಬೇಕಾದರೆ ಒಂದು ಲೆಕ್ಕ ಬೇರೆ. ಇತರ ಸಾಮಾನುಗಳಿಗೆ ಬೇರೆ ಲೆಕ್ಕ. ಆದ್ದರಿಂದ ಅತನಿಗೆ ಬೆಳಿಗ್ಗೆಯಿಂದ ಸಂಜೆಯ ತನಕ ಅಂಗಡಿಗೆ ಬೇಕಾದ ಸಾಮಾನುಗಳನ್ನು ತರುವುದೇ ಕಷ್ಟಕರವಾಗಿರುವಾಗ, ಈ ರೀತಿಯ ತೊಂದರೆಗಳು ಬಂದರೆ, ಅವನು ಹೇಗೆ ತನ್ನ ವ್ಯಾಪಾರವನ್ನು ಮಾಡಬಲ್ಲನು ? ನಾನು ಅನೇಕಸಾರಿ ಮಾನ್ಯ ಮಂತ್ರಿಯವರಿಗೆ ಇದನ್ನು ಹೇಳಿದ್ದೇನೆ. ಇವತ್ತಿನ ಸೇಲ್ಸ್ ಟ್ಯಾಕ್ಸ್ ಸಿಬ್ಬಂದಿವರ್ಗ ಏನಿದೆ, ಅವರು ಇವತ್ತು ಒಂದು ಕಿರುಕುಳದ ಧಾಳಿಯನ್ನೇ ಮಾಡುತ್ತಿದ್ದಾರೆ. ಯಾವ ಕಾನೂನಿನ ಚೌಕಟ್ಟಿನೊಳಗೂ ಬರದ ರೀತಿಯಲ್ಲಿ ಅವರು ಸರ್ಕಾರಕ್ಕೆ ಬರತಕ್ಕ ಹಣವನ್ನು ಬೇರೆಕಡೆಗೆ ತೆಗೆದು

(ಶ್ರೀ ಎಚ್. ಬಿ. ಜ್ವಾಲನಯ್ಯ)

ಕೊಂಡು ಹೋಗುತ್ತಿದ್ದಾರೆ. ಇವತ್ತು ಸೇಲ್ಸ್ ಟ್ಯಾಕ್ಸ್ ಇರಾಖೆಯಲ್ಲಿ ಒಂದು ಕೊನೆಯ ದರ್ಜೆಯ ಹುದ್ದೆಯನ್ನು ಪಡೆಯುವುದಕ್ಕೋಸ್ಕರ ನಾವಿರಾರು ರೂಪಾಯಿ ಕೊಟ್ಟು ಮುಂದೆ ಬರುವವರಿದ್ದಾರೆ. ಇಂಥ ಇರಾಖೆಯಲ್ಲಿ ಇವತ್ತು ಲಂಚರುಷುವತ್ತು ತಾಂಡವವಾಡುತ್ತಿದೆ. ಅದನ್ನು ಯಾರಾದರೂ ತಡೆಗಟ್ಟುವವರಿದ್ದಾರೆಯೇ? ಸರ್ಕಾರ ಸರಿಯಾದ ಕ್ರಮ ತೆಗೆದುಕೊಳ್ಳುತ್ತದೆಯೇ? ಅದೂ ಇಲ್ಲ. ಇವತ್ತು ಕಾನೂನನ್ನು ಸರಿಯಾಗಿ ತಿಳಿದುಕೊಳ್ಳಲು ಸಮರ್ಥರಲ್ಲದೆ ಇರುವಂತಹ ವರ್ತಕ ಜನ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇಂಥ ಜನರಿಗೆ ಈ ಅಧಿಕಾರಿಗಳು ಕಿರುಕುಳವನ್ನು ಕೊಡುತ್ತಿದ್ದಾರೆ. ಆದ್ದರಿಂದ ಈ ತಿದ್ದುಪಡಿ ಏನು ಇದೆ, ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆ. ಗುಜರಾತಿನಲ್ಲೂ ಕೂಡ ಸಣ್ಣ ವರ್ತಕರಿಗೆ 30 ಸಾವಿರದವರೆಗೆ ಟರ್ನ್ ಓವರ್‌ಗೆ ಅವಕಾಶ ಇದೆ. ಅದೇ ರೀತಿ ಇತರ ರಾಜ್ಯಗಳಲ್ಲೂ ಮಾಡಿದ್ದಾರೆ. ಅದೇ ರೀತಿ ಮೈಸೂರು ರಾಜ್ಯಲ್ಲೂ ಕೂಡ ಮಾಡಬೇಕು, ಮತ್ತು ಸರ್ಕಾರದವರು ಇದನ್ನು ಸ್ವಾಗತಿಸುವುದರಲ್ಲಿ ಏನೂ ತೊಂದರೆಯಿಲ್ಲ. ಈ ಖೋತಾವನ್ನು ಬೇರೆ ರೀತಿಯಲ್ಲಿ ಸರಿದೂಗಿಸಬಹುದು. ಈ ರೀತಿ ರೆಕ್ಕಪತ್ರಗಳನ್ನು ಇಡುವುದು ಬಹಳ ಕಷ್ಟ. ಇವತ್ತು ಸರ್ಕಾರಕ್ಕೆ ಬರತಕ್ಕ ಹಣ ಅನೇಕ ಕಡೆಗಳಲ್ಲಿ ತೂತುಬಿದ್ದು ಹೋಗುತ್ತದೆ. ಇದನ್ನು ಮಾಡಿದರೆ, ನಿಜವಾಗಿಯೂ ಲಂಚರುಷುವತ್ತು ತಪ್ಪುತ್ತದೆ, ಮತ್ತು ಎಲ್ಲರೂ ಸರಿಯಾದ ಮಾರ್ಗವನ್ನು ಅನುಸರಿಸುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ, ಈ ಸಭೆ ಈ ತಿದ್ದುಪಡಿಯನ್ನು ಅನುಮೋದಿಸಬೇಕು, ಮತ್ತು ಸಹಾನುಭೂತಿಯಿಂದ ಪರಿಶೀಲಿಸಬೇಕು ಎಂದು ಈ ಸಭೆಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಆರ್ಥಿಕ ಮಂತ್ರಿಯವರು ಕೂಡ ಭೂತಲಿಂಗಮ್ ಕಮಿಟಿ ಏನು ಮಾಡಿದ್ದಾರೆ, ಅವರ ಮುಂದೆ ನನ್ನ ಸಲಹೆಯನ್ನು ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕಡಮೆ ಮಾಡಬೇಕೆಂದು ಏನೂ ಇಲ್ಲ. ಏಷ್ಟೋ ಸಣ್ಣ ಪುಟ್ಟ ವರ್ತಕರಿಗೆ ನಿಮ್ಮ ಸೇಲ್ಸ್ ಟಾಕ್ಸ್ ಇರಾಖೆಯವರು ಬರುವುದು, ಯಮನ ದರ್ಶನವೂ ಆಗುವುದು ಒಂದೇ ಆಗಿದೆ. ಅವರಿಗೂ ವ್ಯತ್ಯಾಸವಿಲ್ಲ, ಇವತ್ತು ದೇಶದ ಜನರು ದೇಶದ ಪ್ರಗತಿಗಾಗಿ ಟ್ಯಾಕ್ಸ್ ಕೊಡಲು ಹಿಂಜರಿಯುತ್ತಾ ಇಲ್ಲ. ಆದರೆ ವಸೂಲು ಮಾಡತಕ್ಕಂತಹ ರೀತಿ ಏನಿದೆ, ಅದು ಸರಿಯಿಲ್ಲ, ಅವರ ಕಿರುಕುಳ ಜನರನ್ನು ನೋಯಿಸುತ್ತಾ ಇದೆ. ನಮ್ಮ ಆರ್ಥಿಕ ಮಂತ್ರಿಯವರಿಗೂ ಅದು ಗೊತ್ತಿದೆ. ಈ ಅಧಿಕಾರಿಗಳು ಕಿರುಕುಳ ಕೊಡುವುದರಿಂದ ಅದರಲ್ಲಿ ರಾಜ್ಯಕ್ಕೂ ಒಳ್ಳೆಯದಿಲ್ಲ. ದೇಶದಲ್ಲಿರುವಂತಹ ಸಣ್ಣ ವರ್ತಕರಿಗೆ ನ್ಯಾಯವಾದ ರೀತಿಯಲ್ಲಿ ಸಲಭ್ಯ ಕಲ್ಪಿಸಿಕೊಡಬೇಕು ಮತ್ತು ಹಾಗೆ ಮಾಡಿದರೆ, ಅವರ ಸಂಸಾರಸ್ಥರು ನಿಮ್ಮನ್ನು ಹಾರೈಸುತ್ತಾರೆ, ನಿಮ್ಮನ್ನು ನೆನೆಸುತ್ತಾರೆ. ಆದ್ದರಿಂದ ನನ್ನ ವಾದವನ್ನು ಮಾನ್ಯ ಸಭೆ ಒಪ್ಪಬೇಕು, ಮತ್ತು ಸರ್ಕಾರದವರು ಸ್ವಾಗತಿಸುತ್ತಾರೆ ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಸಭೆಯ ಮುಂದಿಡುತ್ತೇನೆ.

† ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು).—ಮಾನ್ಯ ಅಧ್ಯಕ್ಷರೇ, ಇವತ್ತು ಜ್ವಾಲನಯ್ಯನವರು ತಂದಿರುವಂತಹ ಸೇಲ್ಸ್ ಟಾಕ್ಸ್ ಅಮೆಂಡ್‌ಮೆಂಟ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈಗ ಮಾನ್ಯ ಭೂತಲಿಂಗಂನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಾರೆ. ನಮ್ಮ ನೆರೆ ಸಂಸ್ಥಾನದಲ್ಲಿ ಮತ್ತು ಮೈಸೂರು ಸಂಸ್ಥಾನದಲ್ಲಿರುವ ಸೇಲ್ಸ್‌ಟ್ಯಾಕ್ಸಿನಲ್ಲಿ ಏಕತೆ ಇಲ್ಲ. ಪ್ರತಿಯೊಂದು ರಾಜ್ಯದಲ್ಲಿ, ಅಂದರೆ ಕೇರಳದಲ್ಲಾಗಲೀ ಮದರಾಸಿನಲ್ಲಾಗಲೀ ವಿವಿಧ ರೀತಿಯ ಸೇಲ್ಸ್ ಟ್ಯಾಕ್ಸ್ ಇದೆ. ಮೈಸೂರಿನಲ್ಲಿ ಸಮರ್ಪಕವಾಗಿದೆ ಎಂದು ನನಗನಿಸುವುದಿಲ್ಲ. ಅದಕ್ಕೋಸ್ಕರ ಶಾಸ್ತ್ರೀಯವಾದ ರೀತಿಯಲ್ಲಿ ಸಮಿತಿಯನ್ನು ನೇಮಿಸಿ ಈಗಾಗಲೇ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ. ಹಿಂದೆ ಮೈಸೂರು ಸಂಸ್ಥಾನದ ಆದಾಯ 18 ಕೋಟಿ ರೂಪಾಯಿ ಇತ್ತು, ಆಗ ನಮ್ಮ ಎಲ್ಲಾ ಕೆಲಸಕಾರ್ಯಗಳನ್ನು ಮಾಡಿಕೊಂಡು ಸುಖ ಸಮೃದ್ಧಿ ಇತ್ತು. ಆದರೆ ಈಗ 200 ಕೋಟಿ ರೂಪಾಯಿ ಆದಾಯ ಇದ್ದರೂ ಹೊಂದಾಣಿಕೆ ಸಾಧ್ಯವಾಗುತ್ತಿಲ್ಲ. ಅದೇನು ತೋರಿಸುತ್ತದೆ ಅಂದರೆ, ದೇಶದಲ್ಲಾಗುವ ಅಭಿವೃದ್ಧಿ ಕಾರ್ಯಗಳಿಗಾಗಿ ಕರ ಭಾರವನ್ನು ಹೇರಲೇಬೇಕಾಗುತ್ತದೆ. ಅದನ್ನು ದೇಶದ ಅಭಿವೃದ್ಧಿಗೋಸ್ಕರ ಖರ್ಚು ಮಾಡಬೇಕಾಗಿದೆ. ಅದೇ ರೀತಿ ಈಗ ನಾವು ಪ್ರೊಹಿಬಿಷನ್‌ನ್ನು ತೆಗೆದು ನಾವು ಏನು ಎಕ್ಸೈಸ್ ಡ್ಯೂಟಿ ಹಾಕಿದರೂ ಕೂಡ ಮೈಸೂರು ಸಂಸ್ಥಾನದ ಆರ್ಥಿಕ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಮೈಸೂರು ಸಂಸ್ಥಾನದ ಆದಾಯ ಮತ್ತಷ್ಟು ಹೆಚ್ಚಬೇಕಾಗಿದೆ. ಮೈಸೂರು ಸಂಸ್ಥಾನ ಇನ್ನೂ ಅನೇಕ ರೀತಿಯ ವಿಧಾಯಕಗಳನ್ನು ತರಬೇಕಾಗಿದೆ.

ನಮ್ಮ ನೀರಾವರಿ ಯೋಜನೆಯಾಗಲೀ, ಬೃಹತ್ ಪ್ರಮಾಣದ ದೇಶದ ಅಭಿವೃದ್ಧಿಯಾಗಲೀ, ಇವುಗಳಿಗೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆ ಎನ್ನುವ ಮಾತನ್ನು ಒಪ್ಪಬೇಕಾಗಿದೆ. ಈಗ ಶ್ರೀಮಾನ್ ಜ್ಯಾಲನಯ್ಯನವರ ವಾದ ಏನಿದೆ ಎಂದರೆ ಚಿಕ್ಕ ವ್ಯಾಪಾರಿಗಳಿಗೆ ಟರ್ನ್ ಓವರನ ಮಿತಿ 10 ಸಾವಿರ ರೂಪಾಯಿಗಳು ಇರುವುದನ್ನು ತೆಗೆದುಹಾಕಿ ಅದನ್ನು 25 ಸಾವಿರ ರೂಪಾಯಿಗಳಿಗೆ ಏರಿಸಬೇಕು ಎಂದು ಹೇಳಿದ್ದಾರೆ. ಬೀಡಿ ಸಿಗರೇಟುಗಳನ್ನು ಇಟ್ಟುಕೊಂಡು ಯಾರು ವ್ಯಾಪಾರ ಮಾಡುತ್ತಾರೆ, ಅವರನ್ನು ಚಿಕ್ಕವ್ಯಾಪಾರಿಗಳೆಂದು ಹೇಳುತ್ತಾರೆ. ಅವರು 10 ಸಾವಿರ ರೂಪಾಯಿಗಳ ಮಿತಿಯನ್ನು ಮೀರಿ ಹೋಗುವುದಿಲ್ಲ. ಆದರೆ ಯಾರು ವ್ಯಾಪಾರದ ಅಂಗಡಿಗಳನ್ನು ಇಟ್ಟುಕೊಂಡು ಅನೇಕ ರೀತಿಯ ಸಾಮಾನುಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆ ಮತ್ತು ಬೋರ್ಡುಗಳನ್ನು ಹಾಕಿಕೊಂಡು ರೆಕ್ಕಪತ್ರಗಳನ್ನು ಇಟ್ಟುಕೊಂಡು ವ್ಯವಹಾರ ಮಾಡುತ್ತಾರೆ ಅವರನ್ನು ಚಿಕ್ಕ ವ್ಯಾಪಾರಿಗಳೆಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಜ್ಯಾಲನಯ್ಯನವರು ಈಗ ಚಿಕ್ಕವ್ಯಾಪಾರಿಗಳಿಗೆ ಸರ್ಕಾರದವರು ಏನೊಂದು ಏನಾಯ್ತಿಯನ್ನು ಕೊಡಬೇಕೆಂದು ಸಲಹೆ ಮಾಡಿದ್ದಾರೆ ಅದರ ಬಗ್ಗೆ ಭೂತಲಿಂಗಂ ಕಮಿಟಿಯವರು ಒಂದು ನಿರ್ಧಾರಕ್ಕೆ ಬರುವುದಕ್ಕೆ ಮುಂಚೆಯೇ ಅದರ ಬಗ್ಗೆ ಒಂದು ನಿರ್ಧಾರವನ್ನು ಸರ್ಕಾರದವರು ಕೈಗೊಂಡರೆ ಸರ್ಕಾರದವರು ಆ ಸಮಿತಿಗೆ ಒಪ್ಪಿಸಿದ ಕಾರ್ಯವನ್ನು ಕುಂಠಿತ ಮಾಡಿದಂತಾಗುತ್ತದೆ. ಆದ್ದರಿಂದ ಈ ವಿಷಯವನ್ನು ಕೈ ಬಿಡಬೇಕೆಂದು ಶ್ರೀಮಾನ್ ಜ್ಯಾಲನಯ್ಯನವರಿಗೆ ಹೇಳುತ್ತೇನೆ. ಸೇರ್ಸ್ ಟ್ಯಾಕ್ಸ್‌ನ್ನು ಬಹಳ ಅನ್ಯಾಯ ಮಾಡುತ್ತಿದ್ದಾರೆ, ಸೇರ್ಸ್ ಟ್ಯಾಕ್ಸ್ ಆಫೀಸರು ಹಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಅನೇಕರು ಹೇಳುತ್ತಿದ್ದಾರೆ. ಆದರೆ ಅದನ್ನು ಯಾರೂ ಯಾವ ಕಾಲಕ್ಕೂ ರುಜುವಾತು ಪಡಿಸಿಲ್ಲ. ಅದನ್ನು ಸರ್ಕಾರದ ಗಮನಕ್ಕೆ ತಂದಿಲ್ಲ. ಮಾನ್ಯ ಮಂತ್ರಿಗಳು ಹಲವಾರು ಸಾರಿ ಹೇಳಿದ್ದಾರೆ ಯಾವ ಸೇರ್ಸ್‌ಟ್ಯಾಕ್ಸ್ ಆಫೀಸರು ಹಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆಯೋ ಅಂಥವರ ಹೆಸರನ್ನು ಸರ್ಕಾರಕ್ಕೆ ತಿಳಿಸಿದರೆ ಅವರುಮೇರೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು. ಸೇರ್ಸ್ ಟ್ಯಾಕ್ಸ್‌ನ್ನು ತಿನ್ನುವ ವಿಷಯದಲ್ಲಾಗಲೀ, ಸೇರ್ಸ್ ಟ್ಯಾಕ್ಸ್ ಇಲಾಖೆಯ ಸಿಬ್ಬಂದಿಯವರ ವಿಷಯದಲ್ಲಾಗಲೀ ದೂರು ಸರ್ಕಾರಕ್ಕೆ ಇದುವರೆಗೆ ನಿರ್ದಿಷ್ಟವಾಗಿ ಬಂದಹಾಗೆ ಕಾಣುವುದಿಲ್ಲ. ಆದ್ದರಿಂದ ಈ ಒಂದು ಮಾತನ್ನು ನಾವು ಸ್ವಾಭಾವಿಕವಾಗಿ ಕೇಳುತ್ತಿದ್ದೇವೆ, ಇದರಲ್ಲಿ ಯಾವ ಸತ್ಯಾಂಶವೂ ಇಲ್ಲ ಎಂಬುದನ್ನು ಮನಗಾಣಬಹುದು. ಆದ್ದರಿಂದ ಶ್ರೀಮಾನ್ ಜ್ಯಾಲನಯ್ಯನವರು ಹೇಳಿದಂತೆ ಚಿಕ್ಕ ವ್ಯಾಪಾರಿಗಳಿಗೆ 25 ಸಾವಿರ ರೂಪಾಯಿಗಳ ವಿನಾಯ್ತಿಯನ್ನು ಕೊಡುವ ಬಗ್ಗೆ ಈಗ ಸರ್ಕಾರದವರು ಒಂದು ಕಮಿಟಿಯನ್ನು ಏನು ನೇಮಕಮಾಡಿದ್ದಾರೆ ಅವರು ನಿರ್ಧಾರ ಕೊಡುವಾಗ ಜನಸಾಮಾನ್ಯರು, ಚಿಕ್ಕವ್ಯಾಪಾರಿಗಳು ಪ್ರತಿಯೊಬ್ಬರೂ ಆ ಕಮಿಟಿಯ ಮುಂದೆ ಹೋಗಿ ಅವರು ತಮ್ಮ ಅಭಿಪ್ರಾಯವನ್ನು ಕೊಡುವ ಅವಕಾಶ ಇರುವುದರಿಂದ ಸಮಿತಿಯವರು ಎಲ್ಲಾ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಅವರು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಉದ್ದೇಶ ಇದೆ. ಈ ದೃಷ್ಟಿಯಿಂದ ಶ್ರೀಮಾನ್ ಜ್ಯಾಲನಯ್ಯನವರು ತಮ್ಮ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತ. ಮತ್ತು ಸಕಾಲಿಕ. ಭೂತಲಿಂಗಂ ಸಮಿತಿಯವರು ಏನು ಅಭಿಪ್ರಾಯವನ್ನು ಕೊಡುತ್ತಾರೆ ಎಂಬುದನ್ನು ನೋಡಿಕೊಂಡು, ಅದರಿಂದ ಮಾನ್ಯ ಸದಸ್ಯರಿಗೆ ಸಮಾಧಾನವಾಗದೇ ಇದ್ದ ಪಕ್ಷದಲ್ಲಿ ಆಗ ಇನ್ನೊಂದು ವಿಧೇಯಕವನ್ನು ಈ ಸಭೆಯಮುಂದೆ ತರಬಹುದು ಎಂದು ಮಾನ್ಯ ಸದಸ್ಯರಿಗೆ ನನ್ನ ಅಭಿಪ್ರಾಯವನ್ನು ತಿಳಿಸಿ ಶ್ರೀಮಾನ್ ಜ್ಯಾಲನಯ್ಯನವರು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಅವರನ್ನು ವಿನಯಪೂರ್ವಕವಾಗಿ ಕೇಳಿಕೊಂಡು ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಪಿ. ವಿ. ಐತಾಳ್ (ಸುರತ್‌ಕರ್).—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಶ್ರೀಮಾನ್ ಜ್ಯಾಲನಯ್ಯನವರು ಈ ಸಭೆಯಮುಂದೆ ತಂದಿರತಕ್ಕಂಥ ಮೈಸೂರು ರಾಜ್ಯದ ಮಾರಾಟ ತೆರಿಗೆಗೆ ಸಂಬಂಧಿಸಿದ ತಿದ್ದುಪಡಿ ಮಸೂದೆಯನ್ನು ನಾನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಪ್ರಥಮವಾಗಿ ಸೇರ್ಸ್ ಟ್ಯಾಕ್ಸ್‌ಅನ್ನು ಜಾರಿಗೆ ತಂದದ್ದು ಮದ್ರಾಸಿನಲ್ಲಿ ಎಂದು ನಾನು ತಿಳಿಯುತ್ತೇನೆ. ಶ್ರೀಮಾನ್ ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಅದು ಜಾರಿಯಲ್ಲಿ ಬಂತು. ಆ ಸಮಯದಲ್ಲಿ ಟ್ಯಾಕ್ಸ್ ಹಾಕುವುದರ ಮಿತಿ ಎಂದರೆ ಟರ್ನ್‌ಓವರ್ ಮಿತಿ 7½ ಸಾವಿರ ರೂಪಾಯಿಗಳು ಇತ್ತು. ಆ ಸಮಯದಲ್ಲಿ ಎಂದರೆ 1939ನೇ ಇಸವಿಯಲ್ಲಿ ಒಂದು ಮುಡಿ ಅಕ್ಕಿಗೆ 2½ ರೂಪಾಯಿ 3 ರೂಪಾಯಿಗಳು ಇತ್ತು. ಇವೊತ್ತು ನಮ್ಮ ಮಂಗಳೂರಿನಲ್ಲಿ ಜೀವನಾವಶ್ಯಕ ವಸ್ತುಗಳ ಕ್ರಯ ಹಿಂದೆ ಇದ್ದುದಕ್ಕಿಂತ 15–16ರಷ್ಟು ಪಾಲು ಜಾಸ್ತಿಯಾಗಿದೆ. ಇಷ್ಟು ಬೆಲೆಗಳು ಜಾಸ್ತಿ ಆಗಿರುವಾಗ ಸೇರ್ಸ್ ಟ್ಯಾಕ್ಸ್‌ನ ಕನಿಷ್ಠ ಪರಿಮಿತಿಯನ್ನು 7½ ಸಾವಿರ ರೂಪಾಯಿಗಳಿಂದ 10 ಸಾವಿರ ರೂಪಾಯಿಗಳಿಗೆ ಮಾತ್ರ

(ಶ್ರೀ ಪಿ. ಎ. ಖತಾಳ್)

ತಂದಿದ್ದಾರೆ. ಇದರಿಂದ ಏನಾಯಿತು ಎಂದರೆ ಸೇಲ್ಸ್‌ಟ್ಯಾಕ್ಸ್‌ಅನ್ನು ಹಾಕುವ ಪರಿಮಿತಿಯನ್ನು ½ ಭಾಗದಷ್ಟು ಮಾತ್ರ ಜಾಸ್ತಿ ಮಾಡಿದರು. 15-16ರಷ್ಟು ಪಾಲು ಬೆರೆಗಳು ಜಾಸ್ತಿಯಾಗಿರುವಾಗ ½ ಭಾಗದಷ್ಟು ಮಾತ್ರ ಪರಿಮಿತಿಯನ್ನು ಜಾಸ್ತಿ ಮಾಡಿರುವುದು ಏನೇನೂ ಸರಿಯಿಲ್ಲ. 10 ಸಾವಿರ ರೂಪಾಯಿಗಳು ಟರ್ನ್‌ಓವರ್ ಆಗಬೇಕಾದರೆ ವ್ಯಾಪಾರಿಗೆ ಒಂದು ದಿವಸಕ್ಕೆ 33 ರೂಪಾಯಿಗಳ ವ್ಯಾಪಾರ ಆಗಬೇಕು. 33 ರೂಪಾಯಿಗಳಿಗೆ ಸೇಲ್ಸ್ ಡಿಪಾರ್ಟ್‌ಮೆಂಟಿನವರ ಅಸೆಸ್‌ಮೆಂಟ್ ಪ್ರಕಾರ 10 ಪರ್ಸೆಂಟ್ ಲಾಭ ಇದೆ ಎಂದು ಹೇಳುತ್ತಾರೆ. ಅದರ ಪ್ರಕಾರ 33 ರೂಪಾಯಿಗಳ ವ್ಯಾಪಾರ ಆಗಬೇಕಾದರೆ 3 ರೂಪಾಯಿ 33 ಪೈಸಾ ಗ್ಯಾಸ್ ಪ್ರಾಫಿಟ್ ಒಂದು ದಿವಸಕ್ಕೆ ಬರುತ್ತದೆ ಎಂದಾಯಿತು. ಇಡೀ ದಿವಸದ 3 ರೂಪಾಯಿ 33 ಪೈಸಾ ಗ್ಯಾಸ್ ಪ್ರಾಫಿಟ್‌ನಲ್ಲಿ ಅಂಗಡಿ ಬಾಡಿಗೆ ಕೊಡಬೇಕು. ಲೈಟ್ ಚಾರ್ಜ್ ಕೊಡಬೇಕು, ಆ ವ್ಯಾಪಾರಿಗೆ ಊಟ, ಕಾಫಿಗೆ ಮನೆಗೆ ಹೋಗಿ ಬರುವ ಚಾರ್ಜ್ ಇವೆರ್ಲಾ ಹೋಗಿ ಒಂದು ದಿವಸಕ್ಕೆ ಅವನಿಗೆ ಒಂದು ರೂಪಾಯಿ ಉಳಿಯುತ್ತದೆಯೇ? ಒಂದು ದಿವಸಕ್ಕೆ ಒಂದು ರೂಪಾಯಿ ಉಳಿಯುತಕ್ಕ ಮನುಷ್ಯನಿಗೆ ಟ್ಯಾಕ್ಸ್ ಹಾಕಬಹುದೇ? ಸ್ವಲ್ಪ ಯೋಚನೆ ಮಾಡಿ ನೋಡಿ. ಇಂಥಾ ಟ್ಯಾಕ್ಸ್ ಹಾಕುವಾಗ 3 ಸಾವಿರ ರೂಪಾಯಿಗಳ ಆದಾಯದವರೆಗೂ ಹಾಕುವುದಿಲ್ಲ. ಒಬ್ಬ ಬಡ ಕೂಲಿ ಬೆಂಗಳೂರಿನಲ್ಲಿ ಒಂದು ದಿವಸಕ್ಕೆ ಕನಿಷ್ಠ 5 ರೂಪಾಯಿಗಳನ್ನು ಸಂಪಾದನೆ ಮಾಡುತ್ತಾನೆ. ಅವನಿಗೆ ತೆರಿಗೆಯನ್ನು ಹಾಕುವುದಕ್ಕೆ ಆಗುತ್ತದೆಯೇ? ಒಬ್ಬ ವ್ಯಪಾರಿ ಒಂದು ಅಂಗಡಿಯನ್ನು ಇಟ್ಟುಕೊಂಡು ಇಡೀ ದಿವಸಕ್ಕೆ 3 ರೂಪಾಯಿ 33 ಪೈಸಾ ಸಂಪಾದನೆ ಮಾಡುವಲ್ಲಿ ಅವನು ತನ್ನ ದಿವಸದ ಖರ್ಚೆರ್ಲಾ ಕಳೆದು ಒಂದು ದಿವಸಕ್ಕೆ ಒಂದು ರೂಪಾಯಿ ಉಳಿಸುವಾಗ ಅಂಥ ಡೀಲರಿಗೆ ತೆರಿಗೆಯನ್ನು ಹಾಕಿ ನೀವು ಅಡ್ಮಿನಿಸ್ಟ್ರೇಷನ್ ಮಾಡಬೇಕಾಗಿದೆ. ಇದನ್ನು ಸ್ವಲ್ಪ ಆರೋಚನೆ ಮಾಡಿ. ಸಣ್ಣ ಸಣ್ಣ ವ್ಯಾಪಾರಸ್ಥರಿಂದ ತೆರಿಗೆಯನ್ನು ವಸೂಲು ಮಾಡುವುದಕ್ಕಾಗಿ ಅಸಿಸ್ಟೆಂಟ್ ಕಮರ್ಷಿಯಲ್ ಆಫೀಸರನ್ನು ನೇಮಕ ಮಾಡಬೇಕಾಗುತ್ತದೆ. ಅವರಿಗೆ 500 ರೂಪಾಯಿಗಳ ಸ್ಕೇಲು. ಅವರಿಗೆ ಬೇಕಾದಂತಹ ಸಿಬ್ಬಂದಿ ಇತ್ಯಾದಿಗಳಿಗೆ ಸಂಬಳ, ಅಲೋಯನ್ಸ್ ಇಪ್ಪುಗಳನ್ನೆಲ್ಲಾ ಲೆಕ್ಕ ಹಾಕಿದರೆ ಅವರಿಂದ ಬರತಕ್ಕ ಉತ್ಪತ್ತಿಗೂ ಈ ಸಿಬ್ಬಂದಿವರ್ಗದವರ ಖರ್ಚಿಗೂ ಜಮಾ ಆಗುತ್ತದೆ. ಸರಿಹೋಗುತ್ತದೆ ಆದಕಾರಣ ಟಾರ್ನ್ಸ್ ಹಾಕುವ ಪರಿಮಿತಿಯನ್ನು, ಟರ್ನ್‌ಓವರನ್ನು 25 ಸಾವಿರ ರೂಪಾಯಿಗಳಿಗೆ ಏರಿಸಿದರೆ ಖರ್ಚಿನಲ್ಲೂ ಕಡಿಮೆಯಾಗುತ್ತದೆ ಸರ್ಕಾರದ ಅಡ್ಮಿನಿಸ್ಟ್ರೇಷನಲ್ಲಿಯೂ ಖರ್ಚು ಕಡಿಮೆಯಾಗುತ್ತದೆ. ಆದಕಾರಣ ಕನಿಷ್ಠ ಪರಿಮಿತಿಯನ್ನು 25 ಸಾವಿರ ರೂಪಾಯಿಗಳಿಗೆ ಏರಿಸಬೇಕು ಎಂದು ಹೇಳತಕ್ಕಂಥ ವಾದ ಅಗತ್ಯ ಮತ್ತು ಜರೂರಾಗಿದೆ. ಅದನ್ನು ಸರ್ಕಾರದವರು ಮಾಡಲೇಬೇಕು.

6-00 P.M.

ಇನ್ನು ಎರಡನೆಯದಾಗಿ ನಮ್ಮ ಸರ್ಕಾರದವರು ಹೇಳಬಹುದು, ಏನೆಂದರೆ ಈಗ ಮಾನ್ಯ ಸದಸ್ಯರು ತಂದಿರುವ ಬಿಲ್ಲನ್ನು ಒಪ್ಪಿಕೊಂಡರೂ ಕೂಡ 10 ಸಾವಿರದಮೇಲೆ ಟರ್ನ್‌ಓವರ್ ಆದರೆ ಟ್ಯಾಕ್ಸ್ ಕೊಡಲೇಬೇಕಾಗುತ್ತದೆ ಎಂದು. ಆದರೆ ಸರ್ಕಾರದವರು ಏನನ್ನು ಮಾಡಿದರೆ ಸೆಕ್ಷನ್ಸ್ 5 (5)ಕ್ಕೆ ಒಂದು ತಿದ್ದುಪಡಿಯನ್ನು ತಂದು 25 ಸಾವಿರದವರೆಗೆ ಟರ್ನ್‌ಓವರ್ ಆದರೆ ಟ್ಯಾಕ್ಸ್ ಕೊಡಬೇಕಾಗಿಲ್ಲ ಎಂದು ಮಾಡಬಹುದು. ಮಾನ್ಯ ಜ್ಯಾಲನಯ್ಯನವರು ತಂದಿರುವ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡರೆ ಸಣ್ಣ ವ್ಯಾಪಾರಸ್ಥರಿಗೆ ಅನುಕೂಲ ಮಾಡಿದಂತಾಗುತ್ತದೆ. ಇವತ್ತಿನ ದಿವಸ ವ್ಯಾಪಾರ ಮಾಡುವವರು ಲೆಕ್ಕಪತ್ರಗಳನ್ನು ಇಡಬೇಕೆಂದು ಹೇಳಿದ್ದೀರಿ. ಆದರೆ ವ್ಯಾಪಾರ ಮಾಡುವವರು ಯಾವ ರೀತಿ ಲೆಕ್ಕ ಪತ್ರಗಳನ್ನು ಇಟ್ಟರೂ ಕೂಡ ತಮ್ಮ ಅಧಿಕಾರಿಗಳಿಗೆ ಸರಿಕಾಣುವುದಿಲ್ಲ. ನಮ್ಮ ಕಡೆ ಕಬ್ಬುನರನ ತಗೆಯುವ ಸಣ್ಣ ಸಣ್ಣ ಅಂಗಡಿಗಳು ಇವೆ. ಕಾಫಿ ಮಾರಾಟದಮೇಲೆ 3 ಪರ್‌ಸೆಂಟ್ ಟ್ಯಾಕ್ಸ್ ಇದ್ದರೆ ಕಬ್ಬುನಹಾಲಿನ ಮೇಲೆ 15 ಪರ್‌ಸೆಂಟ್ ಟ್ಯಾಕ್ಸ್ ಇದೆ. ಈಗ 10 ಪರ್‌ಸೆಂಟ್‌ಗೆ ಇಳಿಸಿದ್ದೀರಿ. ಕೈಯಿಂದ ಅಡಿಸಿ ಕಬ್ಬುನಹಾಲನ್ನು ತೆಗೆದು ಮಾರಾಟ ಮಾಡುವ ಸಣ್ಣ ಸಣ್ಣ ವ್ಯಾಪಾರಿಗಳು ಸಹ ಈ 10 ಪರ್‌ಸೆಂಟ್ ಟ್ಯಾಕ್ಸ್ ಕೊಡಬೇಕಾಗಿದೆ. ನಮ್ಮ ಅಧಿಕಾರಿಗಳು ಮ್ಯಾನುಫ್ಯಾಕ್ಚರಿಂಗ್ ಲೆಕ್ಕ ಬೇರೆ ಇಡಬೇಕು ಎಂದು ಹೇಳುತ್ತಾರೆ. ಆ ರೀತಿ ಇಡದಿದ್ದರೆ " Your accounts are rejected because you have not kept manufacturing accounts "— ಎಂದು ಹೇಳುತ್ತಾರೆ. " your case is liable for best of judgement " ಎಂದು ಕಾನೂನಿನಲ್ಲಿ ಇರುವುದರಿಂದ ವ್ಯಾಪಾರಿಯಾದವನು ಯಾವ

ರೀತಿ ರೆಕ್ಕ ಇಟ್ಟರೂ ಕೂಡ ಅಧಿಕಾರಿಗಳಿಗೆ ಸರಿಕಾಣುವುದಿಲ್ಲ. "every dealer liable for registration is liable for maintenance of accounts also as prescribed under the Act" ಇಷ್ಟೆಲ್ಲಾ ಕಾನೂನಿನಲ್ಲಿ ಮಾಡಿ ಇಟ್ಟಿದ್ದೀರಿ. ಯಾವ ರೀತಿ ರೆಕ್ಕವನ್ನು ಇಡಬೇಕು ಎಂಬ ಬಗ್ಗೆ ಯಾವ ಕಾನೂನಿನಲ್ಲಿಯಾಗಲೀ, ಯಾವ ನೋಟಿಫಿಕೇಷನ್‌ನಲ್ಲಾ ಆಗಲೀ ಹೇಳಿಲ್ಲ. ಈ ಕಾರಣದಿಂದ ವ್ಯಾಪಾರಿಗಳು ಯಾವ ರೀತಿ ರೆಕ್ಕ ಇಟ್ಟರೂ ಕೂಡ ಅಧಿಕಾರಿಗಳಿಗೆ ತಪ್ಪಾಗಿಯೇ ಕಾಣುತ್ತದೆ. ರಿಟರ್ನ್ಸ್ ಕೊಡಬೇಕು ಎಂದು ಹೇಳಿದ್ದೀರಿ. ಆದರೆ ರೆಕ್ಕ ಯಾವ ರೀತಿ ಇಡಬೇಕು ಎಂದು ಹೇಳಿಲ್ಲ. ವರ್ಷದ ಮೊದಲಲ್ಲಾ ಸ್ಟಾಕ್ ಎಷ್ಟು ಇತ್ತು ಎಂಬ ಬಗ್ಗೆ ರೆಕ್ಕ ಇಡಬೇಕು. ಮತ್ತು ತೂಕ ಮಾಡಿ ಇಡಬೇಕು ಎಂದು ಕಾನೂನಿನಲ್ಲಿ ಹೇಳಲಾಗಿದೆ. ಇದು ನಣ್ಣ ನಣ್ಣ ಡೀಲರ್ಸ್‌ಗೆ ಬಹಳ ಕಷ್ಟವಾಗುತ್ತದೆ. ವರ್ಷದ ಮೊದಲಲ್ಲಿ ಮೂರು ಸಾವಿರ ರೂಪಾಯಿನಷ್ಟು ಸ್ಟಾಕ್ ಇತ್ತು ಎಂದು ವ್ಯಾಪಾರಗಾರರು ನಿಜ ಹೇಳಿದರೂ ಕೂಡ, "every case is liable for best of judgement"—ಎಂದು ಕಾನೂನಿನಲ್ಲಿ ಹೇಳಿರುವುದರಿಂದ ಅಧಿಕಾರಿಗಳು ಒಪ್ಪುವುದಿಲ್ಲ. "you have not kept the inventory details of your stock"—ಎಂದು ಹೇಳುತ್ತಾರೆ. ಒಬ್ಬ ವ್ಯಾಪಾರಿ ಒಂದು ಅಂಗಡಿ ಇಟ್ಟು ರಿಜಿಸ್ಟ್ರೇಷನ್ ಮಾಡಿಸಿಕೊಂಡರೆ ಅದನ್ನು ಮತ್ತೆ ಕ್ಯಾನ್ಸೆಲ್ ಮಾಡಿಸುವುದು ಬಹಳ ಕಷ್ಟವಿದೆ. "A dealer, who is once registered should go on renewing his registration. Until it is cancelled, he must go on paying the registration fee". ಒಂದು ಸಾರಿ ರಿಜಿಸ್ಟ್ರೇಷನ್‌ಗೆ ಹೋದರೆ ಗಾಣಕ್ಕೆ ಕೈಕೊಟ್ಟಹಾಗೆ ಆಗುತ್ತದೆ.

ಶ್ರೀಮತಿ ಕೆ. ಲೀಲಾವತಿ ರೈ.—ರಾಯರ್ ಬಳಿ ಯಾರಾದರು ಕೇಸ್ ತೆಗೆದುಕೊಂಡು ಹೋದರೂ ಕೂಡ ಅದೇ ರೀತಿ ಆಗುತ್ತದೆ!

ಶ್ರೀ ಪಿ. ವಿ. ಐತಾಳ.—ರಾಯರ್ ಒಬ್ಬರೇ ಅಲ್ಲ, ಡಾಕ್ಟರ ಬಳಿ ಯಾರಾದರೂ ಹೋದರೆ ಅವರೂ ಸಹ ಅಷ್ಟು ಸುಲಭವಾಗಿ ಬರುವುದಕ್ಕಾಗುವುದಿಲ್ಲ. ಒಂದು ಪಕ್ಷ ರಿಜಿಸ್ಟ್ರೇಷನನ್ನು ಕ್ಯಾನ್ಸಲ್ ಮಾಡಿಸಬೇಕಾದರೆ ಸಂಬಂಧಪಟ್ಟ ಅಧಿಕಾರಿ ಎರಡು ವರ್ಷದಿಂದ 10 ಸಾವಿರ ರೂಪಾಯಿಗಳಿಗಿಂತ ಕಡಿಮೆ ವ್ಯಾಪಾರವಾಗುತ್ತಿದೆ ಎಂದು ಸರ್ಟಿಫೈ ಮಾಡಬೇಕು. ಟರ್ನ್‌ಓವರ್ ಕಡಿಮೆಯಾಗಿದೆ ಎಂದು ಅಧಿಕಾರಿ ರುಜುವಾತು ಮಾಡಿದಮೇಲೆ ಕ್ಯಾನ್ಸಲ್ ಆಗುತ್ತದೆ. ಅಲ್ಲಿಯವರೆಗೂ ಆ ವ್ಯಾಪಾರಿ ರಿಜಿಸ್ಟ್ರೇಷನ್ ಫೀಯನ್ನು ಕಟ್ಟುತ್ತಲೇ ಇರಬೇಕು. ಈ ಕಷ್ಟವನ್ನು ತಪ್ಪಿಸಿಕೊಳ್ಳಲು ಕೆಲವು ವ್ಯಾಪಾರಿಗಳು ತಮ್ಮ ಹೆಸರಿನಲ್ಲಿದ್ದ ರಿಜಿಸ್ಟ್ರೇಷನ್ನನ್ನು ತಮ್ಮ ತಮ್ಮಂದಿರ ಹೆಸರಿಗೆ ಬದಲಾವಣೆ ಮಾಡಿಸಿಬಿಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಶ್ರೀಮಾನ್ ಜ್ಯಾಲನಯ್ಯನವರು ತಂದಿರುವ ತಿದ್ದುಪಡಿಯನ್ನು ಪಾಸ್ ಮಾಡುವುದು ಅಗತ್ಯವಾಗಿದೆ. ಈಗಾಗಲೇ ನಮ್ಮ ಪಕ್ಕದ ರಾಜ್ಯಗಳಾದ ಒರಿಸ್ಸಾ ಮತ್ತು ಮಹಾರಾಷ್ಟ್ರ ಸರ್ಕಾರಗಳು ಟರ್ನ್ ಓವರ್ ಟ್ಯಾಕ್ಸ್ ಕೊಡುವುದನ್ನು 30 ಸಾವಿರ ಮತ್ತು 25 ಸಾವಿರ ರೂಪಾಯಿಗಳವರೆಗೆ ಕನಿಷ್ಠ ಪ್ರಮಾಣವನ್ನು ಏರಿಸಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಕನಿಷ್ಠ ಪ್ರಮಾಣವನ್ನು 10 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸಬೇಕು. ಇಲ್ಲದಿದ್ದರೆ ನಣ್ಣ ಪ್ರಮಾಣದಲ್ಲಿ ಅಂಗಡಿ ಇಟ್ಟುಕೊಂಡಿರುವವರಿಗೆ ಬಹಳ ತೊಂದರೆಯಾಗುತ್ತದೆ. ಈಗ ಕೆಲವರು ವರ್ತಕರು ತಮ್ಮ ಭಾಗದ ಟ್ಯಾಕ್ಸ್‌ನ್ನು ಕ್ರಮವಾಗಿ ಕಟ್ಟಿದ್ದರೂ ಕೂಡ ಅವರಮೇಲೆ ಕೆಲವು ಆಫೆನ್ಸ್ ಬರುತ್ತವೆ. ರಿಟರ್ನ್ಸ್ ಕಳಿಸಿಲ್ಲ, ಕಳಿಸಬೇಕು ಎಂದು ನೋಟೀಸ್ ಕೊಡುತ್ತಾರೆ. ತಪ್ಪಿಲ್ಲದಿದ್ದರೂ ಕೂಡ ನೋಟೀಸ್ ಕೊಡುತ್ತಿರುತ್ತಾರೆ. ಇಂತಹ ಸಮಯದಲ್ಲಿ ಸಂಬಂಧಪಟ್ಟ ವ್ಯಾಪಾರಿಗಳು ಕೋರ್ಟ್‌ಗೆ ಹೋಗುವುದಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿಲ್ಲ.

> "The legality or propriety of any assesement cannot be questioned in a Civil Court. The legality or propriety cannot also be questioned in a Criminal Court."

ಈ ಪ್ರಕಾರ ಕ್ರಿಮಿನಲ್ ಕೋರ್ಟ್‌ಗೆ ಹೋಗುವುದಕ್ಕೂ ಕೂಡ ಅವಕಾಶವಿಲ್ಲ. ಒಂದು ಪಕ್ಷ ರಾಮಕೃಷ್ಣ ಹೆಗಡೆಯವರೇ ವ್ಯಾಪಾರಗಾರರಾಗಿದ್ದರೆ, ಎರಡು ಲಕ್ಷ ರೂಪಾಯಿಗಳ ಟರ್ನ್ ಓವರ್ ಇದೆ, 20 ಸಾವಿರ ರೂಪಾಯಿ ಟ್ಯಾಕ್ಸ್ ಕಟ್ಟಬೇಕು ಎಂದು ನೋಟೀಸ್ ಕಳಿಸಿಬಿಡುತ್ತಾರೆ. ಟ್ಯಾಕ್ಸ್ ಹಾಕಿರುವುದು ಜಾಸ್ತಿಯಾಗಿದೆ ಎಂದು ಕೋರ್ಟ್‌ಗೆ ಏನಾದರೂ ಹೋಗಬೇಕಾದರೆ 20 ಸಾವಿರ ರೂಪಾಯಿಗಳನ್ನು ಕೋರ್ಟ್‌ಗೆ ಕಟ್ಟಿ ನಂತರ ಅಪೀಲ್ ಮಾಡಬೇಕು. 20 ಸಾವಿರ ರೂಪಾಯಿಗಳನ್ನು ಕಟ್ಟದಿದ್ದರೆ ಕೋರ್ಟ್‌ಗೆ ಹೋಗುವ ರೈಟ್ ಇರುವುದಿಲ್ಲ. "your case is

(ಶ್ರೀ ಪಿ. ಎ. ಐತಾಳ್)

liable for best of judgement" ಎಂದು ಇರುವುದರಿಂದ ಅಧಿಕಾರಿಗಳು ಹೇಳಿದ್ದೇ ನರಿ ಎಂಬಂತೆ ಆಗಿದೆ. ಮೊನ್ನೆ ತಾನೇ ಸೇರ್ಸ್ ಟ್ಯಾಕ್ಸ್ ಬಗ್ಗೆ ಒಂದು ತಿದ್ದುಪಡಿಯನ್ನು ತಂದು ಪಾಸ್ ಮಾಡಿದಿರಿ. ಅದರ ಪ್ರಕಾರ ತಪ್ಪಿತಸ್ಥ ವ್ಯಾಪಾರಿ ಸೆಕ್ಷನ್ 29(1)ರ ಪ್ರಕಾರ ಮನೆಯಲ್ಲಿಯೇ ಇದ್ದು ಫೈನ್ ಹಣವನ್ನು ಕೋರ್ಟಿಗೆ ಕಳಿಸಬಹುದು. ಕೋರ್ಟಿಗೆ ಹೋಗಲೇಬೇಕಾಗಿಲ್ಲ. ಒಂದು ಸಾರಿ ದಂಡವನ್ನು ಕಟ್ಟಿದರೆ 15 ದಿವಸದ ಬಳಿಕ ಆತನ ಮೇಲೆ ಮತ್ತೆ ಕೇಸ್ ಹಾಕುತ್ತಾರೆ :

> "you have admitted that you have failed to keep proper and correct accounts and therefore you are liable for prosecution under section 29 (2)."

ಸೆಕ್ಷನ್ 29 (2) ರ ಪ್ರಕಾರ ಜೈಲಿಗೆ ಬೇಕಾದರೂ ಕಳಿಸಬಹುದು. ಬಡ ವ್ಯಾಪಾರಿಗಾರರಿಗೆ ಇಷ್ಟೆಲ್ಲಾ ತೊಂದರೆಗಳು ಇವೆ. ಈ ಕಾರಣದಿಂದ ಮಾನ್ಯ ಜ್ಯಾಲಯ್ಯನವರು ತಂದಿರುವ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡರೆ ಬಡ ವ್ಯಾಪಾರಸ್ಥರಿಗೆ ಅನುಕೂಲ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಇವತ್ತಿನ ದಿವಸ ಯಾರಾದರೂ ಒಬ್ಬರು ಒಂದು ಅಂಗಡಿಯನ್ನು ತೆರೆದರೆ ಸಾಕು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಂದ :

> " You have opened a shop on such and such a date, I estimate your turn over at Rs. 20,000, you pay at the monthly rate of Rs. 40 ".

ಎಂದು ನೋಟೀಸ್ ಬಂದು ಬಿಡುತ್ತದೆ. ಇವರ ಜೊತೆಗೆ ಮತ್ತೊಂದು ಕಂಡೀಷನ್ ಹಾಕುತ್ತಾರೆ ಏನೆಂದರೆ :

> " In addition to monthly payment of provisional advance tax, he has to deposit 6 months tax as security tax."

ಪ್ರತಿ ತಿಂಗಳು ಟ್ಯಾಕ್ಸ್ ಕಟ್ಟುವುದಲ್ಲದೆ 6 ತಿಂಗಳ ಟ್ಯಾಕ್ಸ್‌ನ್ನು ಸೆಕ್ಯುರಿಟಿಯಾಗಿ ಬೇರೆ ಇಡಬೇಕು ವ್ಯಾಪಾರಸ್ಥರಿಗೆ ಇಷ್ಟೊಂದು ತೊಂದರೆಗಳು ಇವತ್ತಿನ ದಿವಸ ಇವೆ. ಸರ್ಕಾರದವರು ಇವತ್ತಿನ ದಿವಸ ಸೆಕ್ಷನ್ 32ರ ಪ್ರಕಾರ ವ್ಯಾಪಾರನ್ನನ ಕೈಕಟ್ಟಿ ಹಾಕಿದ್ದಾರೆ, ಸೆಕ್ಷನ್ 35ರ ಪ್ರಕಾರ ಕಾಲು ಕಟ್ಟಿಹಾಕಿದ್ದಾರೆ, ಇದರ ಜೊತೆಗೆ ಮೊನ್ನೆ ತಂದ ತಿದ್ದುಪಡಿಯ ಪ್ರಕಾರ ಆತನ ನಾಲಿಗೆಗೂ ಕೂಡ ಬೀಗ ಹಾಕಿದ್ದಾಯಿತು. ವ್ಯಾಪಾರಸ್ಥನ ಅವಸ್ಥೆ ಇನ್ನು ಮುಗಿಯಿತು. ಕ್ರಿಮಿನರ್ ಕೋರ್ಟು ಹಾಗೂ ಸಿವಿರ್ ಕೋರ್ಟುಗಳಿಗೆ ಹೋಗಿ ಹೀಗೆ ಟ್ಯಾಕ್ಸ್ ಹಾಕುವುದು ನರಿಯಲ್ಲ ಎಂದು ಅಪೀಲು ಹೋಗುವಂತೆ ಏಕೆ ಮಾಡುತ್ತೀರಿ ? ಹೀಗೆ ಇದರ ಮೇಲೆ ರಿಸ್ಟ್ರಿಕ್ಷನ ತರಬಾರದು. ಆದುದರಿಂದ ಮಾನ್ಯ ನದನ್ಯರಾದ ಶ್ರೀ ಜ್ಯಾಲಯ್ಯನವರು ಇಲ್ಲಿ ತಂದಿರುವ ಅಮೆಂಡುಮೆಂಟನ್ನು ನರಕಾರದವರು ಒಪ್ಪಿದರೆ ಒಂದು ರೀತಿಯಾದ ಹೆಚ್ಚು ಲಿಬರ್ಟಿ ದೊರೆಯುತ್ತದೆ ಎಂದು ನಾನು ಇಲ್ಲಿ ಒತ್ತಿ ಹೇಳುತ್ತೇನೆ. ಇದರಲ್ಲಿ ಮಿಡಲ್ ಕ್ಲಾಸ್ ವರ್ಗದವರೂ ಬರುತ್ತಾರೆ. ಕನಿಷ್ಠ ಪಕ್ಷ ಒಬ್ಬ ವರ್ತಕನಿಗೆ ಒಂದು ಲಕ್ಷ ದಷ್ಟು ಟರ್ನ್ ಓವರು ಇದ್ದರೆ ಅವನಿಗೆ ಸುಮಾರು ಹತ್ತು ಸಾವಿರದಷ್ಟು ಗ್ರಾಸ್ ಪ್ರಾಫಿಟ್ ಆಗುತ್ತದೆ ಮತ್ತು ಇದರಲ್ಲಿ ಕೊನೆಗೆ ನೆಟ್‌ಪ್ರಾಫಿಟ್ ಆಗಿ ಸುಮಾರು ಐದು ಸಾವಿರ ರೂಪಾಯಿಗಳಾಗಬಹುದು. ನಮ್ಮಂತಹ ಎಂ.ಎರ್.ಎ ಗಳಿಗೆ ತಿಂಗಳಿಗೆ ನಾನೂರು ರೂಪಾಯಿ ಸಂಬಳ ಎಂದರೆ ವರ್ಷಕ್ಕೆ ಸುಮಾರು 4,800 ರೂಪಾಯಿಗಳು ಬರುತ್ತದೆ. ನಮ್ಮ ಬೆಂಗಳೂರು ಸಿಟಿಯಲ್ಲಿ ವರ್ಷಕ್ಕೆ ಪೂರೆಸ್ಟ್ ಕ್ಲಾಸು ಒಬ್ಬರು ಗಂಡ ಮತ್ತು ಹೆಂಡತಿ ಸಂಸಾರ ಮಾಡಬೇಕಾದರೆ ಒಂದು ತಿಂಗಳಿಗೆ 500 ರೂಪಾಯಿಗಳಾದರೂ ಬೇಕಾಗುತ್ತದೆ. ಇದಕ್ಕಿಂತ ಕಡಿಮೆ ಇದ್ದರೆ ಅವನು ಜೀವನ ನಡೆಸುವುದು ಕಷ್ಟ. ಈಗಾಗಲೇ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಎಂದು ಸರಕಾರ ಬೇರೆ ಹಾಕಿದೆ ಮತ್ತು ಇದೂ ಅಲ್ಲದೆ ನಮ್ಮ ಮಾನ್ಯ ಮಂತ್ರಿಗಳವರು ಹತ್ತು ಸಾವಿರದಿಂದ ಇಪ್ಪತ್ತು ಸಾವಿರದವರೆಗೆ ಇದ್ದರೆ ಅವರಿಗಾಗಿ ಒಂದು ರೀತಿಯ ಸ್ಲಾಬ್ ರೇಟು ಎಂದು ತಿಂಗಳಿಗೆ 10, 15, 20 ಅಥವಾ 25 ರೂಪಾಯಿಗಳಷ್ಟು ಟ್ಯಾಕ್ಸ್ ಪಡೆಯಬೇಕು ಎಂದು ಮಾಡಿದ್ದಾರೆ. ಇದರಲ್ಲಿ ಕೆಲವು ಗುಡ್ಸ್‌ಗಳ ಮೇಲೆ ಸಿಂಗರ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕು ಎಂದು ಹೇಳಿದ್ದಾರೆ. ಅದರ ಇವು ಯಾವ ಯಾವ ವಸ್ತುಗಳು ಎನ್ನುವುದರ ವಿವರಗಳನ್ನು ಪೂರ್ತಿ ಹೇಳಲಿಲ್ಲ. ಇದರಲ್ಲಿ ಲೆಕ್ಕಪತ್ರಗಳು ಸರಿಯಾಗಿದ್ದರೆ ಸರಿಯಾಗಿರುತ್ತದೆ ಇಲ್ಲದಿದ್ದರೆ ಕಷ್ಟವಾಗುತ್ತದೆ. ಸೆಕ್ಷನ್ 17 (ಇ) ಪ್ರಕಾರ ಒಂದು ಲಕ್ಷದೊಳಗೆ ಪರಿಮಿತ ಇರತಕ್ಕ ವ್ಯಾಪಾರಸ್ಥರಿಗೆ ಇದರಿಂದ ತುಂಬಾ ಅನನು

ಕೂಲವಾಗುತ್ತದೆ. ನಮ್ಮ ಮಂಗಳೂರಿಗೆ ಈಗ್ಗೆ ಕೆಲವು ದಿನಗಳ ಹಿಂದೆ ಗುಜರಾತ್ ರಾಜ್ಯದ ಫೈನಾನ್ಸ್ ಮಿನಿಸ್ಟರವರು ಬಂದಿದ್ದರು. ಅವರು ಇಲ್ಲಿ ಬಂದಿದ್ದಾಗ ಸೇಲ್ಸ್‌ಟ್ಯಾಕ್ಸ್ ವಿಚಾರವಾಗಿ ಮಾತನಾಡುತ್ತಾ ಅವರು ಬಹಳ ಸುಲಭ ರೀತಿಯ ಟ್ಯಾಕ್ಸ್ ಸ್ಪ್ರಕ್ಚರು ಮಾಡಬೇಕೆಂದು ಇದ್ದೇವೆ, ಇದನ್ನು ದೇಶದ ಎಲ್ಲಾ ಕಡೆಗಳಲ್ಲಿಯೂ ಅನುಸರಿಸಿದರೆ ಕನ್‌ಸ್ಯೂಮರ್ ಗುಡ್ಸ್ ತೆಗೆದು ಕೊಳ್ಳುವವರಿಗೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳಿದರು. ಟ್ಯಾಕ್ಸ್ ಹೇಗೆ ಹಾಕಬೇಕು ಎನ್ನುವುದರ ಬಗ್ಗೆ ಅವರು ಒಂದು ಅಭಿಪ್ರಾಯ ಕೊಟ್ಟಿದ್ದಾರೆ. The consumer should not feel that any tax is collected from him. ಇದು ಟ್ಯಾಕ್ಸ್‌ನ ತತ್ವಕ್ಕೇ ವಿರೋಧವಾಗುತ್ತದೆ. ಇದರಲ್ಲಿ ಹತ್ತು ಸಾವಿರದೊಳಗೆ ಒಬ್ಬರ ಟರ್ನ್ ಓವರು ಇದ್ದರೆ ಅವರಿಗೆ ವರ್ಷಕ್ಕೆ ನುಮಾರು 33 ರೂಪಾಯಿಗಳಷ್ಟು ಟ್ಯಾಕ್ಸ್ ಬೀಳುತ್ತದೆ. ಇದರ ಬಗ್ಗೆ ಸರಕಾರ ನಿರ್ದಿಷ್ಟವಾದ ನಿಯಮವನ್ನು ಮಾಡಬೇಕಾಗಿತ್ತು. ಪರಿಮಿತಿಯನ್ನು ನುಮಾರು 25 ಸಾವಿರ ಎಂದು ಇಟ್ಟರೆ ಆಗ ವರ್ತಕರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಈಗ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ಒಂದು ಸಾವಿರ ರೂಪಾಯಿ ವ್ಯಾಪಾರ ಮಾಡುವವನನ್ನು ಅವನ ಪರ್ಚೇಸ್ಸು ಬಿಲ್ಲುಗಳೆಲ್ಲಿ ಎಂದು ಕೇಳುತ್ತಾರೆ. ಒಬ್ಬ ಸಣ್ಣ ತರಕಾರಿ ವ್ಯಾಪಾರ ಮಾಡುವವನು ಬಿಲ್ಲುಗಳನ್ನು ಹೇಗೆ ತಾನೆ ತಂದು ಇಡಲು ಸಾಧ್ಯ ? ಅಲ್ಲದೆ ಬೋರ್ಡಿಂಗ್ ಹಾಗೂ ರಾಡ್ಡಿಂಗು ಹೋಟೇಲು ಮಾಲೀಕನಿಗೆ ಹತ್ತು ಸಾವಿರ ಟರ್ನ್ ಓವರ್ ಇದೆ ಎಂದು ಇಟ್ಟುಕೊಳ್ಳೋಣ. ಅವನು ತರಕಾರಿ ಹಾಗೂ ಕಟ್ಟಿಗೆಗಳಿಗೆ ಬಿಲ್ಲುಗಳನ್ನು ಎಲ್ಲಿಂದ ತಾನೇ ತರುತ್ತಾನೆ ? ಅವನಲ್ಲಿ ಬಿಲ್ಲುಗಳಿಲ್ಲದಿದ್ದರೆ ಅವನ ಲೆಕ್ಕ ತಪ್ಪು ಎಂದು ಹೇಳುತ್ತಾರೆ. ತರಕಾರಿ ಮಾರುವವನೇ ಆಗಲೀ ಹೋಟೆಲು ಇಟ್ಟುಕೊಂಡು ಸಣ್ಣ ವ್ಯವಹಾರ ಮಾಡುವವರು ಕಟ್ಟಿಗೆ, ತರಕಾರಿ ಇತ್ಯಾದಿ ಸಾಮಾನುಗಳಿಗೆ ಬಿಲ್ಲುಗಳನ್ನು ಹೇಗೆ ತಾನೇ ತರಲು ಸಾಧ್ಯ ? ಇದನ್ನು ಸರಕಾರ ವಿಚಾರಮಾಡಬೇಕು. ಪಾನ್‌ಬೀಡಾ ಅಂಗಡಿ ಇಟ್ಟುಕೊಂಡಿರುವ ಒಬ್ಬ ಸಣ್ಣ ವರ್ತಕನೂ ಕೂಡ ನಿಮ್ಮ ಕಾನೂನು ಪ್ರಕಾರ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕು. Otherwise ' at any time he is liable to be sent to the jail '. ಯಾರೋ ಒಬ್ಬರು ಒಂದು ಬೀಡಾ ಅಥವಾ ಒಂದು ಸಿಗರೇಟನ್ನು ಕೇಳಿದರೆ ಅವರಿಗೆ ಅವನು ಬಿಲ್ ಕೊಡಬೇಕು ಎಂದು ಹೇಳಿದರೆ ಹೇಗೆ ?

ಒಂದು ಕ್ಯಾಶ್ ಬಿಲ್ ಆದರೂ ಕೊಡಬೇಕು. ಅದು ಕೊಟ್ಟರೂ ಸಾಲದು. ಅದನ್ನು ಕಾರ್ಬನ್ ಕಾಪಿ ಮಾಡಿ, ಡೂಪ್ಲಿಕೇಟ್ ಮಾಡಿರುವುದನ್ನು ತೋರಿಸಬೇಕು. ಇಲ್ಲದೇ ಇದ್ದರೆ, ಅದು ಎಲ್ಲಿ ಎಂದು ಕೇಳುತ್ತಾನೆ. ಹೋಟೇಲಿಗೆ ಹಲಸಂದೆಕಾಳು ಬೆಂಡೆಕಾಯಿ ವಗೈರೆ ಏನು ಸಾಮಾನು ತಂದರೂ ಎಲ್ಲದಕ್ಕೂ ಬಿಲ್ ಇಟ್ಟು ತೋರಿಸಬೇಕು. ಹಾಗೆಯೇ ಸೇಲ್ಸ್ ಮಾಡಿದ ಬಿಲ್ ಸಹ ಇರಬೇಕು ಮತ್ತು ತಯಾರು ಮಾಡುವ ತಿಂಡಿಗೆಲ್ಲಾ ಸ್ಟಾಕ್ ಅಕೌಂಟ್ ಇಡಬೇಕು, ನೀನು ಎಷ್ಟು ಇಡ್ಲಿ ತಯಾರು ಮಾಡಿದ್ದೀಯಾ. ನೀನು ಎಷ್ಟು ಬಿಸ್ಕತ್ತು ತಯಾರು ಮಾಡಿದ್ದೀಯಾ, ನಿನ್ನಲ್ಲಿ ಯಾವ ಯಾವ ತಿಂಡಿಯನ್ನು ಎಷ್ಟೆಷ್ಟು ತಯಾರು ಮಾಡುತ್ತೀಯಾ ಇದನ್ನೆಲ್ಲಾ ಸ್ಟಾಕ್ ಅಕೌಂಟ್‌ನಲ್ಲಿ ಲೆಕ್ಕ ಇಟ್ಟು ತೋರಿಸಬೇಕು ಎಂದು ಕೇಳುತ್ತಾನೆ. ನಾನು ಹೇಳುವುದು ಹೋಟರ್‌ಗಳಲ್ಲಿ ಏನು ತಯಾರು ಮಾಡಿದರೂ ಕೆಲಸದವರು ತಿಂದು ಉಳಿದದ್ದು ಅವನಿಗೆ ಮಾರಲಕ್ಕೆ ಸಿಕ್ಕುತ್ತದೆ.

ಇನ್ನು ಪ್ರೊಹಿಬಿಷನ್ ವಿಷಯ. ಕಳ್ಳು ಮಾರುವುದೇ ಕಂಟ್ರಾಕ್ಟರ್ ಕೆಲಸ. ಹಿಂದೆ ಟಾಡಿ ಮೇಲೆ ಟ್ಯಾಕ್ಸ್ ಇರಲಿಲ್ಲ. ಅದರಿಂದ ಸ್ವಲ್ಪ ಸ್ವಲ್ಪ ಲಾಭವೂ ಕೂಡ ಆಗುತ್ತಿತ್ತು. ಈಗ 2 ವರ್ಷದಿಂದಲೂ ಲಾಭವಿಲ್ಲ. ಕಳ್ಳು ಮಾಡುವ ಕಂಟ್ರಾಕ್ಟರಿಗೆ 2 ಸಾವಿರ, 3 ಸಾವಿರ ರೂಪಾಯಿ ಟ್ಯಾಕ್ಸ್ ಹಾಕಿದ್ದಾರೆ. ಕಾರಣ ಏನು ಎಂದು ಕೇಳಿದರೆ ನನು ಕೇಳುತ್ತಾನೆ ಅನಿನಗೆ ಎಷ್ಟು ಲೀಟರ್ ಬಂತು, ಇದಕ್ಕೆ ರಶೀತಿ ಉಂಟೋ. ಎಷ್ಟು ಕಳ್ಳು ಮಾರಿದ್ದೀಯೇ ಇದಕ್ಕೆ ಡೂಪ್ಲಿಕೇಟ್ ರಶೀತಿ ಉಂಟೋ ಎಂದು. ಇದಕ್ಕೆಲ್ಲಾ ಆ ಕಂಟ್ರಾಕ್ಟದಾರನು ರಶೀತಿ ಹೇಗೆ ಕೊಡುತ್ತಾನೆ ? ರಶೀತಿ ಕೊಡದೇ ಇದ್ದರೆ ಅವನು ಟ್ಯಾಕ್ಸ್ ಅಸೆಸ್ಸ್ ಮಾಡುವ ರೀತಿ ಹೀಗಿದೆ ಪಾಮ್ ಟ್ರೀನಿಂದ ಟಾಡಿ ತೆಗೆಯಬೇಕಾದರೆ ತಿಂಗಳಿಗೆ 50 ಮರದಮೇಲೆ ಆಗುತ್ತಾ ಇಲ್ಲ. ಆದರೂ ಒಂದು ಮರಕ್ಕೆ ಒಂದು ದಿವಸಕ್ಕೆ ಒಂದು ಲೀಟರ್ ಪ್ರಕಾರ ಒಂದು ಲೆಕ್ಕಾಚಾರ ಇಟ್ಟುಕೊಂಡು ಟ್ಯಾಕ್ಸ್ ಹಾಕುತ್ತೇನೆ ಎಂದು ಹೇಳುತ್ತಾನೆ. ಎಕ್ಸ್‌ಸೈಜ್ ರೂಲ್ಸ್ ಪ್ರಕಾರ 9½ಗಂಜೆ ಮೇಲೆ ಅದನ್ನು ಮಾರಾಟ ಮಾಡ ಕೂಡದು, ಅನಂತರ ಅದನ್ನು ಡಿಸ್ಟಾಯ್ ಮಾಡಬೇಕೆಂದು ಇದೆ. ಒಂದು ದಿವಸಕ್ಕೆ ಕೆಲಸಗಾರರಿಗೆ ಎಷ್ಟು ತಲಬು ಕೊಡುತ್ತೀಯೇ ? ಎಷ್ಟು ಜನ ಇದ್ದಾರೆ ? ನಿನ್ನಲ್ಲಿ ಸೇಲ್ಸ್ ಎಷ್ಟು ಉಂಟು ? ಈ ರೀತಿ ಒಂದು ಲೆಕ್ಕಾಚಾರ ಇಟ್ಟುಕೊಂಡು ಅವನು ಮನಬಂದಂತೆ ಮಾರಾಟ ಟ್ಯಾಕ್ಸ್ ಹಾಕುತ್ತಾನೆ, ಕೊಡದಿದ್ದರೆ ಜಫ್ತಿ.

ಇನ್ನೊಂದು ವಿಷಯ ಏನೆಂದರೆ ಪೆಟ್ರೋಲ್ ಡೀಲರ್ಸ್ ಅಸೆಟ್ಸ್ ಅಂಡ್ ಲಯಬಿಲಿಟೀಸ್ ವಿಷಯ. ಒಂದು ವೇಳೆ ಈ ಡೀಲರ್ ರಿಜಿಸ್ಟ್ರೇಷನ್ ಮಾಡಿಸುತ್ತಾನೆ ಎಂದು ಇಟ್ಟುಕೊಳ್ಳೋಣ. ಅವನು 20 ಸಾವಿರ ಕಟ್ಟಬೇಕಂತೆ. ಕೊಟ್ಟಿಬಿಟ್ಟರೆ ಅವನ ಕಾಂಟ್ರಾಕ್ಟ್ ಕ್ಯಾನ್ಸಲ್ ಆಗುತ್ತದೆ. ಅವನು ವ್ಯಾಪಾರ ಮಾಡುವ ಹಾಗಿಲ್ಲ. 21ನೇ ದಿವಸ ಕಳೆಯುವುದೇ ತಡ 22ನೇ ದಿವಸ ಕೋರ್ಟಿಗೆ ಬರಲು ನೋಟೀಸ್ ಕೊಡದೆ ಒಂದೇ ಸಾರಿ ವಾರೆಂಟ್ ಬರುತ್ತದೆ. ಒಂದು ಸಲ ರಿಜಿಸ್ಟ್ರೇಷನ್ ಆಗಿಬಿಟ್ಟರೆ ಸಾಕು, ಅವರ ಹತ್ತಿರ ಸಿಕ್ಕಹಾಕಿಕೊಂಡಹಾಗೆ. ಒಂದು ಲಕ್ಷವಮೇರೆ ಕೊಡುವಂಥ ಡೀಲರ್ಸ್‌ಮೇರೆ ಹಲವು ಸಲ ಟ್ಯಾಕ್ಸ್ ವಸೂಲು ಮಾಡಲು ನಕ್ಷತ್ರಿಕನಂತೆ ಬಂದು ಅವರನ್ನು ಹಿಂಡಿ ಬಿಟ್ಟು ವಸೂಲು ಮಾಡುತ್ತಾರೆ. ಆದೇ ರೀತಿಯಲ್ಲಿ ಸೇಲ್ಸ್‌ಟ್ಯಾಕ್ಸ್ ರಿಜಿಸ್ಟ್ರೇಷನ್ ಮಾಡಿಬಿಟ್ಟರೆ ಅವರನ್ನು ಈ ರೀತಿ ತೊಂದರೆ ಮಾಡಿಬಿಡುತ್ತಾರೆ. ಆದರೆ ರೀಫಂಡ್ ಮಟ್ಟಿಗೆ ಶೈಲಕನ ಹಾಗೆ ಒಂದು ವೈಶಿಷ್ಟ್ಯ ರೀತಿ ಅನುಸರಿಸುತ್ತಾರೆ. ಶೈಲಕ ಹೇಗೆಂದರೆ ಜೀವ ಹೋದರೂ ಹಣವನ್ನು ಕೊಡುವುದಿಲ್ಲವೆಂಬಂತೆ ಮತ್ತು ಕೋಮಟಿ ರೀತಿಯಲ್ಲಿ ಬಂಗಾರಕ್ಕೆ ಬೀಗ ಹಾಕಿದ ಹಾಗೆ ಅನುಸರಿಸುತ್ತಾರೆ. ರೀಫಂಡ್ ಏನು ಮಾಡಿದರೂ ಕೊಡುವುದಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ನಾವು ರೀಫಂಡ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಅವನು ಹೈಕೋರ್ಟಿಗೆ ಹೋಗಿ ಅಪೀಲಿನಲ್ಲಿ ಗುಣ ಕಂಡುಬಂದರೂ 30 ಪರ್ಸೆಂಟು ಬಿಡ್ಡಿ ಹಾಕುತ್ತಾರೆ. ಅದೂ ಕೂಡ ಒಂದೇ ಸಲ ಟ್ಯಾಕ್ಸ್ ಕಟ್ಟಬೇಕೆಂದು ಹೇಳುತ್ತಾರೆ. ಅವನು ಕೊಡದೇ ಹೋದರೆ 21 ದಿವಸ ಆದಮೇರೆ ಅವನು ಕೊಡುವ ವರೆಗೂ 30 ಪರ್ಸೆಂಟು ಬಡ್ಡಿ ಹಾಕುತ್ತಾರೆ. ಅವನು ಈ ರೀತಿ ಹೈಕೋರ್ಟಿಗೆ ಹೋಗಿ ಗುಣ ಮಾಡಿಕೊಂಡು ಬಂದರೂ ಅವನಿಗೆ ಯಾವ ವಿಶಾಯಿತಿಯನ್ನೂ ಕೊಡುವುದಿಲ್ಲ. ಆದುದರಿಂದ ಶ್ರೀಮಾನ್ ಜ್ಯಾವನಯ್ಯನವರು ಈಗ ಏನು ಇದರ ಮೇರೆ ತಿದ್ದುಪಡಿ ತಂದಿದ್ದಾರೋ ಅದನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ತಂದಿರುವ ತಿದ್ದುಪಡಿಯಲ್ಲಿ ಸ್ವಲ್ಪ ಫ್ರೀಡಂ ಆಫ್ ಟ್ರೇಡ್ ಸಿಕ್ಕುತ್ತದೆ. ಇದನ್ನು ಒಪ್ಪಿದರೆ ವ್ಯಾಪಾರಸ್ಥರಿಗೆ ಸ್ವಲ್ಪ ಒತ್ತಡ ಕಡಿಮೆಯಾಗುತ್ತದೆ ಅಲ್ಲದೆ ಸಣ್ಣಪುಟ್ಟ ವ್ಯಾಪಾರಿಗಳಿಗೂ ಅನುಕೂಲವಾಗುತ್ತದೆ. ಆ ತಿದ್ದುಪಡಿಯಲ್ಲಿ ಸ್ವಲ್ಪ ಅನುಕೂಲವಾಗುವುದರ ದೆಸೆಯಿಂದ ಅವರು ತಂದಿರುವ ತಿದ್ದುಪಡಿಯನ್ನು ಒಪ್ಪಬೇಕೆಂದು ಮತ್ತೊಂದು ಸಾರಿ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ —ಅಧ್ಯಕ್ಷರೇ, ಶ್ರೀಮಾನ್ ಜ್ಯಾವನಯ್ಯನವರು ತಂದಿರತಕ್ಕಂಥ ತಿದ್ದುಪಡಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಮೂರು ಕಾರಣಗಳನ್ನು ಕೊಡುತ್ತೇನೆ. ಮೊದಲನೆಯದಾಗಿ ಸೇರ್ಸ್‌ಟ್ಯಾಕ್ಸ್ ಮತ್ತು ಇನ್ನೂ ಇತರ ಟ್ಯಾಕ್ಸ್, ಸ್ಮಗ್ಲರ್, ಅಡ್ಮಿನಿಸ್ಟ್ರೇಷನ್ ಮತ್ತು ಪ್ರೊಸೀಜರ್ ಈ ಮೂರು ದೃಷ್ಟಿಯಿಂದ ವಿಚಾರ ಮಾಡಿ, ಸರ್ಕಾರಕ್ಕೆ ವರದಿ ಕೊಡಬೇಕೆಂದು ಶ್ರೀಮಾನ್ ಭೂತಪಿಂಗಂರವರ ಅಧ್ಯಕ್ಷತೆಯಿಂದ ಕೂಡಿದ ಒಂದು ಕಮಿಟಿಗೆ ಅದನ್ನು ಒಪ್ಪಿಸಿದ್ದೇವೆ. ಆ ಕಮಿಟಿಯಲ್ಲಿ ಈ ಎರಡೂ ಮನೆಯ ಸದಸ್ಯರುಗಳೂ ಇದ್ದಾರೆ. ಅವರು ಮೈಸೂರಿನ ವ್ಯಾಪಾರಸ್ಥರನ್ನೂ, ಪೈಯಕ್ತಿಕವಾಗಿಯೂ ಮತ್ತು ಸಂಘದ ಪ್ರತಿನಿಧಿಗಳನ್ನೂ ಕರೆದು ವಿಚಾರ ಮಾಡುತ್ತಾರೆ. ಯಾರು ಬೇಕಾದರೂ ಅವರ ಮುಂದೆ ತಮ್ಮ ಅಭಿಪ್ರಾಯವನ್ನು ಇಡುವ ಹಕ್ಕು ಇದೆ. ಅವರು ವಿಚಾರ ವಿನಿಮಯ ಮಾಡುವಂಥ ಸಂದರ್ಭ ಇರುವಾಗ ಶ್ರೀಮಾನ್ ಜ್ಯಾವನಯ್ಯನವರು ತಂದಿರತಕ್ಕಂಥ ಬಿಲ್ಲನ್ನು ಅಂಗೀಕರಿಸುವಂಥಾದ್ದು ಸಾಧುವಲ್ಲ.

6–30 P.M.

ಎರಡನೆಯದು ಶ್ರೀ ಐತಾಳ್ ಕೊಟ್ಟಿದ್ದಾರೆ. ಅದು ನೋಡಲಕ್ಕೆ 10 ಸಾವಿರವಿಂದ 25 ಸಾವಿರಕ್ಕೆ ಮಿತಿ ಏರಿಸಬೇಕೆಂದು ಕಾಣುತ್ತೆ ಅವರ ಮೂರೋದ್ದೇಶ ಎಕ್ಸಂಪ್ಷನ್ ಲಿಮಿಟ್ ಏರಿಸಬೇಕು ಎಂಬುದು. ಅದೂ ಅಲ್ಲದೆ ಈ ಕಲಂ ಮತ್ತು ಮತ್ತೊಂದು ಕಲಂ ಎರಡಕ್ಕೂ ತಿದ್ದುಪಡಿ ಶ್ರೀ ಜ್ಯಾವನಯ್ಯನವರು ತರುತ್ತಿದ್ದಾರೆ. ಒಂದನ್ನು ಬಿಟ್ಟು ಒಂದನ್ನು ಮಾಡಿದರೆ ತೊಡಕು ಬರುವುದು.

ಮೂರನೆಯದು ಮಾನ್ಯ ಸದಸ್ಯರಾದ ಜ್ಯಾವನಯ್ಯನವರು ಮತ್ತು ಐತಾಳರು ವಾದವೇನು ಮಾಡಿದ್ದಾರೆಂದರೆ ಇಂದು ಸೇರ್ಸ್‌ಟ್ಯಾಕ್ಸ್ ಕಮಿಷನ್ ಮಟ್ಟದ ವರ್ತಕರನ್ನು ಹಿಂಸಿಸಿ ತೆಗೆಯುಕೊಳ್ಳಬಾರದು, ದೊಡ್ಡವರಿಂದ ಪಡೆಯಬೇಕು ಎಂದು. ಇದಕ್ಕೆ ಕಳೆದ ಒಂದು ಒಂದೂವರೆ ವರ್ಷದಿಂದ ಸರಕಾರಕ್ಕೆ ಈ ರೀತಿ ಬೇಡಿಕೆ ಬರುತ್ತಿದೆ. ಹೊಚೇರ್ ಮಾಲೀಕರ ಸಂಘದವರು ಒಂದು ದೊಡ್ಡ

ಚಳವಳಿ ಪ್ರಾರಂಭಿಸಿದ್ದಾರೆ, ಒಂದು ವರ್ಷದಿಂದಲೂ ಕಾರ್ಡಿನ ಸುರಿಮಳೆ ಮತ್ತು ಪ್ರಿಂಟ್ ಮಾಡಿದ ಮನವಿಪತ್ರಗಳ ಸುರಿಮಳೆ ನಮ್ಮ ಹತ್ತಿರಕ್ಕೆ ಬರುತ್ತಿವೆ, ನೀವು 10 ಸಾವಿರಕ್ಕೆ ನಿಲ್ಲಿಸಿದ್ದೀರಿ, ಇದರಿಂದ ಯಾವ ಒಂದು ಸಣ್ಣ ಹೋಬಳಿಲೂ ಕೂಡ ಏನಾಯಿತಿ ಪಡೆಯುಲು ಸಾಧ್ಯವಿಲ್ಲ, ಆದಕ್ಕಾಗಿ 25 ಸಾವಿರಕ್ಕೆ ಏರಿಸಬೇಕು ಎಂದು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಚರ್ಚೆಯಲ್ಲಿ ತೊಡಗುವುದಕ್ಕೆ ಬಯಸುವುದಿಲ್ಲ. ಇದರ ಪರವಾಗಿ ಮತ್ತು ವಿರುದ್ಧವಾಗಿ ವಾದಿಸಬಹುದು. ಅನೇಕ ಸಂದರ್ಭಗಳಲ್ಲಿ ನಮ್ಮ ಅನುಭವ ನಿಜವಾಗಿಯೂ ಟರ್ನ್‌ಓವರ್ 30 ಸಾವಿರ ರೂಪಾಯಿದ್ದರೆ ತೋರಿಸುವುದು 10 ಸಾವಿರ ರೂಪಾಯಿ. ಆದುದರಿಂದ ಈ ಅಪಾದನೆಯನ್ನು ಜನರಲ್ಲಾಗಿ ಎಲ್ಲರಮೇಲೂ ಮಾಡುವುದಿಲ್ಲ. ಪ್ರಾಮಾಣಿಕವಾಗಿ ವ್ಯವಹಾರ ಮಾಡುವವರೂ ಇರಬಹುದು, ಅವರು ಬಹಳಮಟ್ಟಿಗೆ ಕಷ್ಟಕ್ಕೆ ಗುರಿಯಾಗುವರು. ಏನೇ ಇರಲಿ, ಇದರಲ್ಲಿ ವಾಸ್ತವಿಕ ವಿರುವುದನ್ನು ತಿಳಿದುಕೊಂಡಿದ್ದೇನೆ. ಮಾನ್ಯ ಜ್ಯಾಲನಯ್ಯನವರು ಹೇಳಿದಂತೆ ಈ ವಿಚಾರವನ್ನು ಪುನಃ ಭೂತಲಿಂಗಂ ಸಮಿತಿ ಪರಿಶೀಲಿಸುವಂತೆ ತಿಳಿಸುತ್ತೇವೆ, ಈ ವಿಚಾರ ಈಗಾಗಲೇ ಅವರ ಮುಂದಿದೆ. ಎಲ್ಲ ಅಭಿಪ್ರಾಯಗಳನ್ನೂ ಪರಿಶೀಲಿಸಿ ಅವರು ಯೋಗ್ಯ ನಿರ್ಣಯಕ್ಕೆ ಬರುವರು. ಯಾವ ಶಿಫಾರಸ್ಸು ಅವರು ಮಾಡುವರೋ ಆ ಪ್ರಕಾರ ಸರಕಾರ ತೀರ್ಮಾನಮಾಡುವುದು. ಮಾನ್ಯ ಸದಸ್ಯರು ತಂದ ತಿದ್ದುಪಡಿ ಬಹಳಮಟ್ಟಿಗೆ ಉತ್ತಮವಾಗಿದೆ. ನಾನು ಹೇಳಿದ ಧರವಸೆಮೇರೆ ಅವರು ತಮ್ಮ ತಿದ್ದುಪಡಿ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ಸಾರ್ವಜನಿಕ ಜೀವನದಲ್ಲಿ ಚಿಕ್ಕ ವರ್ತಕರಿಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ಅರಿತಿರುವುದಾಗಿ ಹೇಳಿದ್ದಾರೆ. ಅದರ ಜೊತೆಗೆ ಈ ತಿದ್ದುಪಡಿ ತಂದ ಕಾಲದಲ್ಲಿ ಭೂತಲಿಂಗಂ ಕಮಿಟಿ ನೇಮಕವಾಗಿರಲಿಲ್ಲ ಎಂದು ಕಾಣುತ್ತದೆ. ಈಗ ಇದನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸುವುದಕ್ಕೆ ತಕ್ಕ ವ್ಯವಸ್ಥೆಯಾಗಿದೆ, ಸರಕಾರ ಕೂಡ ಕೆಲವುಳವನ್ನು ಅರಿತಿದೆ ಎಂದು ಧರವಸೆ ಕೊಟ್ಟಿರುವುದರಿಂದ, ಭೂತಲಿಂಗಂ ಕಮಿಟಿ ಈ ಸಭೆಯಲ್ಲಿ ನಡೆದ ಚರ್ಚೆಯನ್ನು ಗಮನಿಸಿ ಸಣ್ಣ ವರ್ತಕರಿಗೆ ವಿಶೇಷವಾದ ಒಂದು ರೀತಿಯ ಸೌಲಭ್ಯ ಕಲ್ಪಿಸುವುದು ಒಂದು ಸುವ್ಯವಸ್ಥೆ ಮಾಡುವರು ಎಂದು ನಂಬಿ ಈ ಒಂದು ತಿದ್ದುಪಡಿ ವಿಧೇಯಕವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

[MR. DEPUTY SPEAKER in the Chair]

The Bill was, by leave, withdrawn.

Mysore Public men Enquiries Bill, 1969.

Motion to Consider.

SRI H. N. NANJE GOWDA.—Sir, I beg leave of the House to move :

"That the Mysore Public Men Enquiries Bill, 1969 be taken into consideration."

SRI K. PUTTASWAMY.—Sir, I rise to a point of order.

[MR. SPEAKER in the Chair]

Sir, I have risen on a point of order to say that that a Bill of this nature cannot be taken into consideration in this House on two grounds, one is that this House is not competent to consider this Bill as it is beyond its jurisdiction, and the second is, if it is held that this House is competent, it is hit by the mischief of article 207(3) of the Constitution. This Bill has not received the recommendation or the sanction of the Governor for consideration by this House.

Sir, while dealing with the first ground, we have to consider whether the Chief Justice or the Judges of the High Court would be performing a Judicial function or a non-judicial function. It is within